ನವಸಾಕ್ಷರ ಪುಸ್ತಕ ಮಾಲೆ ೪೦

ಬೆಪ್ತಕ್ಕಡಿ ಭೋಳೆಶಂಕರ

ಡಾ. ಜಿ. ಎಲ್. ಭಟ್



ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಲೋಕಶಿಕ್ಷಣ ನಿರ್ದೇಶನಾಲಯ

ನವಸಾಕ್ಷರ ಪುಸ್ತಕ ಮಾಲೆ - ೪೦

ಬೆಪ್ಪತ್ತಕ್ಕಡಿ ಭೋಳೆಶಂಕರ

ಡಾ. ಜಿ. ಎಸ್. ಭಟ್

ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ
ಹಂಪಿ-೫೮೩ ೨೭೭

BEPTAKKADI BHOLE SHANKARA : By Dr. G. S. Bhat. Published by The Director of Prasaranga, Kannada University, Hampi - 583 211, KARNATAKA.
First Impression 1994, Pp. i i + 26, Rs. 8.00.

ಸಂಯೋಜನಾಧಿಕಾರಿ
ಎಚ್. ಎಸ್. ಶ್ರೀಮತಿ
ಪಠ್ಯ ಪುಸ್ತಕ ರಚನಾ ವಿಭಾಗ

ಪ್ರಕಾಶಕರು
ನಿರ್ದೇಶಕರು
ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ
ಹಂಪಿ - ೫೮೩ ೨೧೧

ಮುಖಪುಟ ವಿನ್ಯಾಸ
ಕೆ. ಮಕಾಳಿ

ಬೆಲೆ : ರೂ. ೮.೦೦

ಮುದ್ರಕರು
ಬೃಂದಾವನ ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್ ಪ್ರೈ.ಲಿ.
೧೨/೧೩, ಲಾಲ್‌ಬಾಗ್ ಫೋರ್ಟ್ ರಸ್ತೆ,
ಬೆಂಗಳೂರು – ೫೬೦ ೦೦೪.

ಬೆಪ್ತಕ್ಕಡಿ ಭೋಳೆಶಂಕರ

ಬೆಪ್ತಕ್ಕಡಿ

ಒಂದಾನೊಂದು ಕಾಲದಲ್ಲಿ ಒಂದಾನೊಂದು ಊರು. ಅದರ ಹೆಸರೋ ಶಿವಾಪುರ. ಅದು ಮರಗಳ ಕೆಳಗೆ, ತಂಪುನೆರಳಲ್ಲಿ, ಹಸಿರು ಹುಲ್ಲಿನ ಮೇಲಿತ್ತು.

ಅಲ್ಲಿ ಒಂದು ತುಂಬ ಹಳೆಯ ರೈತಕುಟುಂಬ. ಅದರಲ್ಲಿ ಮೂವರು ಅಣ್ಣ ತಮ್ಮಂದಿರು. ದೊಡ್ಡವ ಸರದಾರ ಸೋಮಣ್ಣ. ಆಳಲಿಕ್ಕಾಗಿಯೇ ಹುಟ್ಟಿದವ. ಕುರಿ, ಕೋಳಿ, ತಿಂದವ. ಸಾಧ್ಯವಾದರೆ ಮನುಷ್ಯರನ್ನೂ ಕೊಲ್ಲಬಲ್ಲವ. ಎರಡನೆಯವ ಸಾವುಕಾರ ಕಾಮಣ್ಣ. ಹೊಟ್ಟೆ ಮಜಬೂತಣ್ಣ. ಯಾನೆ ಡಬ್ಬಣ್ಣ. ಡಬ್ಬು ಎಣಿಸುವುದರಲ್ಲಿ ಆತ ಜಾಣ. ಹಸು, ಹಣ ಎಣಿಸಬಲ್ಲ. ಊರವರ ಜಮೀನನ್ನು ಎಕರೆಗಳ ಅಂಕೆಯಲ್ಲಿಯೇ ಹೇಳಬಲ್ಲ. ಮೂರನೆಯವನೇ ಬೆಪ್ತಕ್ಕಡಿ ಭೋಳೇಶಂಕರ. ಅವನಾಯ್ತು, ಭೂಮಿ, ಸೀಮೆ, ಮಳೆ, ಬೆಳೆ ಆಯ್ತು. ಒಂದು ನೊಣ ನೋಯಿಸಿದವನಲ್ಲ. ವಾರಕ್ಕೆ ಮುಂಚೆಯೇ ಮಳೆ ಬರುವದನ್ನು ಹೇಳಬಲ್ಲ. ನಿಂತ ನೀರು ಹರಿಯಲು ಕಾಲುವೆ ತೋಡಬಲ್ಲ. ಹೂವಿಗೆ ಬೀಳುವ ಕನಸು ಹೇಳಬಲ್ಲ. ಇನ್ನೇನಪ್ಪ ಎಂದರೆ ಕೈಬೆರಳು ಬಳಸದೆ ಎಣಿಸಲಾರ. ಇನ್ನೊಬ್ಬರನ್ನು ನೋಡಿ ನಗಬಾರದು ಎಂಬ ನೀತಿಯುಳ್ಳವ.

ಜೀವಮಾನದಲ್ಲಿ ಯಾವ ಸಂಶಯವೂ ಅವನನ್ನು ಕಾಡಲಿಲ್ಲ. ಚೆನ್ನಾಗಿ ಬದುಕಿದರಾಯ್ತು ಎಂದು ನಂಬಿದವ. ಎಂದೂ ತಲೆಕೆಡಿಸಿಕೊಂಡವನಲ್ಲ. ಹಾಡುತ್ತಲೇ ಹೊಲದಲ್ಲಿ ದುಡಿಯುತ್ತಿದ್ದ.

ಅಣ್ಣಂದಿರು ಇಬ್ಬರೂ ತಮ್ಮನ ಜತೆ ಹೊಲದಲ್ಲಿ ಕೆಲಸಮಾಡುತ್ತಿದ್ದರು. ಅವರ ಹೆಂಡಂದಿರೂ ಕೆಲಸಕ್ಕೆ ಬರುತ್ತಿದ್ದರು. ಆದರೆ ಭೋಳೆಶಂಕರನಂಥ ಸಂತೋಷ ಅವರಲ್ಲಿ ಇರಲಿಲ್ಲ. ಒತ್ತಾಯಕ್ಕೆ ಕೆಲಸಮಾಡುತ್ತಿದ್ದರು. ಒಬ್ಬ ಭಯಂಕರ ಸೈತಾನ ದೊರೆ ಇದ್ದ. ಅವನ ಕಣ್ಣು ಈ ಸಹೋದರರ ಮೇಲೆ ಬಿತ್ತು. ಅವನಿಗೆ ಬೆಪ್ತಕ್ಕಡಿ ಭೋಳೆಶಂಕರ ಮತ್ತು ಸೋದರರ ನಡುವೆ ವಿರಸ ತರುವ ಬಯಕೆ. ಅವರು ಛಲದಿಂದ ಕಲಹ ಆಡಲಿ ಎಂಬ ಹಂಬಲ. ಅವಗಡಿಸಿ ಅವಮಾನಿಸಿಕೊಳ್ಳಲಿ ಎಂಬ ಆಸೆ. ಕಿವಿ, ಮೂಗು, ಹಲ್ಲು ಕಣ್ಣುಗಳನ್ನು ಕೀಳುವ ತವಕ. ಮನಸ್ಸನ್ನು ಹೊಲಸುಮಾಡಿ ಸಾಯಿಸುವ ತಹತಹ. ತನ್ನ ಪರಿವಾರದಲ್ಲಿ ಇದ್ದ ಮೂವರು ಪಿಶಾಚಿಗಳಿಗೆ ಊದ ಬೇಕಾದುದನ್ನು ಊದಿದ. ಭೂಲೋಕಕ್ಕೆ ಕಳುಹಿಸಿಕೊಟ್ಟ.

ಮೂರೂ ಪಿಶಾಚಿಗಳು ನೆಲಕ್ಕೆ ಇಳಿದವು. ಸೀದಾ ಶಿವಾಪುರಕ್ಕೆ ಹೋದವು. ಸಹೋದರರು ದುಡಿಯುತ್ತಿದ್ದ ಹೊಲಕ್ಕೇ ಬಂದವು. ಬೆಪ್ತಕ್ಕಡಿ ಹಾಡುತ್ತಾ ಗೆಯ್ಯುತ್ತಿದ್ದ. ಹಾಡು ಮುಗಿದಾಗ ಒಂದು ಬಿರುಗಾಳಿ ಬೀಸಿದ ಹಾಗೆ ಆಯಿತು. ದನ ಮುಂದೆ ಸಾಗದೆ ನಿಂತಿತು. ಮರದೆಲೆ ಬಾಡಿದವು. ಯಾರದೋ ನಿಟ್ಟುಸಿರಿನ ಹಾಗೆ ಗಾಳಿ ಬೀಸಿತು. ಮೋಡ ಉರಿವಂತೆ ಕಾಣಿಸಿತು. ಪಿಸುದನಿ ಕೇಳಿಸಿತು. ಒಬ್ಬರನ್ನು ಇನ್ನೊಬ್ಬರು ಕರೆದಂತಾಯಿತು. ಬೆನ್ನ ಮೇಲೆ ಯಾರೋ ಕೈ ಇಟ್ಟ ಹಾಗೆ ಅನಿಸಿತು. ದೊಡ್ಡ ಪಿಶಾಚಿ ಸರದಾರ ಸೋಮಣ್ಣನ ಹಿಂದೆ ನಿಂತಿತು. ಸಣ್ಣದು ಸಾವ್ಕಾರಣ್ಣನ ಹಿಂದೆ ನಿಂತಿತು. ಪುಟ್ಟ ಪಿಶಾಚಿ ಭೋಳೆಶಂಕರನ ಹಿಂದೆ ನಿಂತಿತು. ಆತ ಸುತ್ತಲಿನ ಬದಲಾವಣೆ ಗಮನಿಸಿದ. ಯಾಕೆ ಇದ್ದೀತು ಎಂದುಕೊಂಡ. ತನ್ನ ಕೆಲಸದಲ್ಲಿ ಮುಳುಗಿದ. ಸರದಾರ ಸೋಮಣ್ಣ, ಸಾವ್ಕಾರ ಡಬ್ಬಣ್ಣ ಚಡಪಡಿಸಿದರು. ಎದುರಿಗೆ ಒಂದು ಎತ್ತರದ ಬೆಟ್ಟ. ಇಬ್ಬರಿಗೂ ಅದರ ನೆತ್ತಿಯಿಂದ ನೆಗೆಯುವ ಆಸೆ ಯಾಯಿತು. ಹಿಂದೆ ಎಂದೂ ಹೀಗೆ ಆಗಿರಲಿಲ್ಲ. ಭೋಳೆಶಂಕರನಿಗೆ ಮಾತ್ರ ಅಂಥ ಆಸೆ

ಆಗಲಿಲ್ಲ. ಬೆಪ್ತಕ್ಕಡಿ ಆದುದರಿಂದ ಉಂಟಾಗಿರಲಿಕ್ಕಿಲ್ಲ. ಸಾವ್ಕಾರಣ್ಣ ಮತ್ತೆ ಬೆಟ್ಟದ ತುದಿಗೆ ನೋಡಿದ. ಕೆಂಪು ಹೂವಿನ ಮಳೆ. ಅದರ ಮರೆಯಲ್ಲಿ ಒಂದು ದೇವತೆ. ಆ ದೇವತೆಗೆ ದುಂಡಗೆ ಉರಿವಕಣ್ಣು. ಹೊಳೆಯುವ ಹಲ್ಲು. ಒಂದರ ಬದಲು ಎರಡು ದೇವತೆ. ಅದಕ್ಕೆ ಎತ್ತಿನ ಹಾಗೆ ಕೊಂಬು. ಒಬ್ಬೊಬ್ಬರಿಗೆ ಒಂದೊಂದು ಥರ ಕಾಣಿಸಿತು. ದೇವತೆಗಳೇ ಆಗಿದ್ದರೆ



ಮೂರು ಪಿಶಾಚಿಗಳು ಮೂರು ಅಣ್ಣ ತಮ್ಮಂದಿರನ್ನು ಹೊಕ್ಕಿರುವುದು

ಭೋಳೆಶಂಕರನಿಗೂ ಕಾಣಿಸಬೇಕಿತ್ತು. ಅವನಿಗೆ ದೆವ್ವ ಭೂತ ಮಾತ್ರ ಕಾಣಿಸಲು ಸಾಧ್ಯ ಎಂದು ಅವರು ಹೇಳಿದರು. "ಒಮ್ಮೊಮ್ಮೆ ಪಿಶಾಚಿಗಳು ಈ ರೀತಿ ಆಟ ಆಡುವದಿದೆ. ಭಕ್ತಿಯಿಂದ ಶಿವನ ಹೆಸರು ತೆಗೆದುಕೊಂಡು ಆ ಕಡೆ ನೋಡಬೇಕು" ಭೋಳೇಶಂಕರ ಹೇಳಿದ. ‘ ನಿಮ್ಮನ್ನು ನೋಡಿದರೆ ನಗೆ ಬರುತ್ತದೆ ’ ಅಂದ. ಅದನ್ನು ಕೇಳಿ ಹೆಂಗಸರಿಗೆ ಸಿಟ್ಟು ಬಂತು. ದೊಡ್ಡ ಮನುಷ್ಯ ಅಲ್ಲವೆ ?ತಿಂದ ರೊಟ್ಟಿಯ ಲೆಕ್ಕವೂ ಗೊತ್ತಾಗದು. ನಮ್ಮನ್ನು ನೋಡಿ ನಗಬೇಕು ಅನ್ನಿಸ್ತಂತೆ ’ ಎಂದು ಗೇಲಿಮಾಡಿದರು. ‘ ಬೆಪ್ತಕ್ಕಡಿಗೆ ಮನುಷ್ಯರು

ಎಂದರೆ ಅಷ್ಟಕಷ್ಟೆ. ಎತ್ತಿನ ಸಹವಾಸವೇ ಅವನಿಗೆ ಸಂತೋಷ. ಎತ್ತಿಗಿಂತ ಅವನಿಗೆ ಚೂರು ಬುದ್ಧಿ ಹೆಚ್ಚು ' ಎಂದು ಅಣಕಿಸಿದರು. ಭೋಳೆಶಂಕರ ಯೋಚಿಸಿದ. ತಾನು ದಡ್ಡನಿರಬಹುದು. ಅವರು ಏನು ಹೇಳುತ್ತಾರೆ ಎಂದು ತಿಳಿಯುತ್ತಿರಲಿಲ್ಲ. ಅನ್ನಿಸಿದ್ದನ್ನು ಹೇಳುತ್ತಿದ್ದ. 'ನಂಬಿಕೆ ಬರದಿದ್ದರೆ ಸೀದಾ ನಗರಕ್ಕೆ ಹೋಗಿ ' ಅಂದು ಬಿಟ್ಟ. ತನ್ನ ಕೆಲಸಕ್ಕೆ ತೊಡಗಿದ. ಹೆಂಗಸರಿಗೆ ರೇಗಿ ಹೋಯಿತು. ಗಂಡಂದಿರು ಸುಮ್ಮನಿದ್ದರು. ಇಬ್ಬರೂ ಗಂಡಂದಿರನ್ನು ತರಾಟೆಗೆ ತೆಗೆದುಕೊಂಡರು. ಬೆಪ್ಪಕ್ಕಡಿ ಜತೆ ಬದುಕಲು ಸಾಧ್ಯವಿಲ್ಲ ಎಂದು ಜಗಳ ತೆಗೆದರು. ಭೋಳೇಶಂಕರ ಪ್ರಾಣಿ ಎಂದರು. ಬೇರೆಯಾಗಿ ಜೀವಿಸಲು ನಿರ್ಧರಿಸಿದರು. ಆಸ್ತಿ ಪಾಲು ಮಾಡಲೇಬೇಕು ಎಂದು ಹಠಹಿಡಿದರು. ತಮಗೆ ಬೇಕಾದಂತೆ ಬದುಕುವ ಕನಸು ಕಂಡರು. ಗಂಡಂದಿರೂ ಒಪ್ಪಿದರು.

ಸಾವ್ಕಾರಣ್ಣ ಆಸ್ತಿಪಾಲು ಮಾಡಿದ. ದುಡ್ಡಿರುವ ಪೆಟ್ಟಿಗೆ ಮತ್ತು ಆಭರಣ ತನಗಿರಲಿ ಎಂದ. ಒಳ್ಳೆಯ ಗದ್ದೆ, ತೋಟ, ಹೊಲವೆಲ್ಲ ಅಣ್ಣನಿಗೆ ಎಂದ. ನದಿ ಹತ್ತಿರದ ಕಲ್ಲು ಮರಡಿ ಬೆಪ್ಪಕ್ಕಡಿಗೆ ಎಂದ. ಕೆಲಸ ಆಯಿತು. ಅವರು ಹೊರಟು ಹೋದರು.

ಬೆಪ್ಪಕ್ಕಡಿ ತನ್ನಷ್ಟಕ್ಕೆ ತಾನು ಇರಲು ಬಯಸಿದ. ಅವನಿಗೆ ನೆಮ್ಮದಿ ಮುಖ್ಯ. ಮುಳ್ಳುಹಾಸಿಗೆಯ ಮೇಲೆ ಮಲಗಿದ್ದರೂ ಚೆಂಗುಲಾಬಿ ಹಾಗೆ ನಗಬೇಕು ಅಂದುಕೊಂಡ.

ನಗಬೇಕೋ ತಮ್ಮ ನಗಬೇಕೋ

ಪಿಶಾಚಿಗಳು ಕೆಲಸ ಹಂಚಿಕೊಂಡಿದ್ದವು. ಸರದಾರ ಸೋಮಣ್ಣ, ಸಾವ್ಕಾರಣ್ಣ ಅವುಗಳ ಬಲೆಗೆ ಬಿದ್ದಿದ್ದರು. ಹೆಂಡಂದಿರ ಮಾತು ಕೇಳಿ ಆಸ್ತಿಪಾಲು ಮಾಡಿಕೊಂಡಿದ್ದರು. ಮೊದಲ ಮತ್ತು ಎರಡನೆಯ ಪಿಶಾಚಿಗಳ ಕೆಲಸ ಸುಲಭ ಆಯಿತು.

ಮೂರನೆಯದರ ಕೆಲಸ ಕಷ್ಟ. ಅದು ಭೋಳೆಶಂಕರನನ್ನು ಬಲೆಗೆ ಬೀಳಿಸಬೇಕು. ಅವನು ಮಹಾ ಪಾಕಡಾ. ಆಸ್ತಿ ಪಾಲುಮಾಡುವಾಗ ಜಗಳಾಡಲಿಲ್ಲ. ಕಣ್ಣು ಕಿವಿ ಕಿತ್ತಾಡಲಿಲ್ಲ. ಕೇಳಿದ್ದನ್ನು ಕೊಟ್ಟಿದ್ದ. ಅವನ ಕಣ್ಣು, ಕಿವಿ, ಚುರುಕು. ಅಣ್ಣಂದಿರ ಹಿಂದೆ ಪಿಶಾಚಿಗಳು ನಿಂತಿದ್ದನ್ನು ಪತ್ತೆಮಾಡಿದ್ದ. ಗಾಳಿಯ ರೂಪದಲ್ಲಿವೆ ಎಂದು ಹೇಳಿದ್ದ.

ಮೂರು ಪಿಶಾಚಿಗಳಿಗೆ ಸಾಕಷ್ಟು ಸರ್ವೀಸ್ ಆಗಿತ್ತು. ಈಗ ಅವರ ಅನುಭವಕ್ಕೆ ಮಸಿಬಳಿದಿತ್ತು. ಬೆಪ್ತಕ್ಕಡಿಯಂಥ ಪಾಕಡಾನ ಅವರು ನೋಡಿರಲಿಲ್ಲ. ಮಾತಿಗೆ ಒಮ್ಮೆ ಪಿಶಾಚಿಗಳು ಕೇಳಬಾರದ ಹೆಸರು ಹೇಳುತ್ತಿದ್ದ. ತಂತಾನೇ ಮಾತನ್ನು ಆಡಿಕೊಳ್ಳುತ್ತಿದ್ದ. ವಶಪಡಿಸಿಕೊಳ್ಳುವುದು ಸುಲಭವಾಗಿರಲಿಲ್ಲ. ಚಿಂತೆಯೇ ಆಗಿತ್ತು.

ಭೋಳೆಶಂಕರ ಹೊಲದಲ್ಲಿ ಉಳುತ್ತಿದ್ದ. ಮರದ ನೆರಳಲ್ಲಿ ರೊಟ್ಟಿ ಇಟ್ಟಿದ್ದ. ಅದನ್ನು ಕದಿಯಲು ಈ ಪುಟ್ಟ ಪಿಶಾಚಿ ಬಂದಿತ್ತು. ಬೆಪ್ತಕ್ಕಡಿ ಹಸಿದು ಬರುತ್ತಾನೆ. ರೊಟ್ಟಿಯನ್ನು ಯಾರು ಕದ್ದರು ಎಂದು ಬೈದಾಡುತ್ತಾನೆ. ಅವನಿಗೆ ಸಿಟ್ಟು ಬರುತ್ತದೆ. ಮನಸ್ಸು ಕೆಡುತ್ತದೆ. ತಾನು ಅವನ ಮನಸ್ಸನ್ನು ಹೊಗಬಹುದು ಎಂದು ಯೋಚಿಸಿತ್ತು. ರೊಟ್ಟಿ ಕದ್ದಿತು. ಮರೆಯಲ್ಲಿ ನಿಂತಿತು. ಭೋಳೆಶಂಕರ ಹಸಿದ. ಉಳುವದನ್ನು ನಿಲ್ಲಿಸಿದ. ರೊಟ್ಟಿ ತಿನ್ನಲುಬಂದ. ಅಲ್ಲಿ ರೊಟ್ಟಿ ಇರಲಿಲ್ಲ. ಹುಡುಕಿದ. ರೊಟ್ಟಿ ಸಿಗಲಿಲ್ಲ. ಆದರೆ ಆತ ಸಿಟ್ಟಾಗಲಿಲ್ಲ. ಬೈದಾಡಲಿಲ್ಲ. ಹಸಿದವರು ಯಾರೋ ತಿಂದಿರಬೇಕು ಎಂದುಕೊಂಡ.



ಪಿಶಾಚಿಯು ಭೋಳೆಶಂಕರನಿಗೆ ನರಿ ರಕ್ತ ಬೆರಸಿದ ಪಾನಕವನ್ನು ಕೊಟ್ಟಿರುವುದು.

ಒಂದು ಹೊತ್ತು ರೊಟ್ಟಿ ತಿನ್ನದಿದ್ದರೆ ಸಾಯುವುದಿಲ್ಲವಲ್ಲ ! ಕೆಲಸ ಮುಗಿಸಿ ಉಂಡರೆ ಆಯ್ತು ಎಂದುಕೊಂಡ. ಸುಮ್ಮನೆ ಕೆಲಸಕ್ಕೆ ಹೋದ. ಪಿಶಾಚಿ ಕಾಣಿಸಿಕೊಂಡಿತು. ಎಲಾ ಅಯೋಗ್ಯ ! ಹಸಿದರೂ ಕೋಪ ಮಾಡಿಕೊಳ್ಳಲಿಲ್ಲ. ಅದಕ್ಕೆ ಅಚ್ಚರಿಯಾಯಿತು. ಸೋಲನ್ನು ಒಪ್ಪಿಕೊಳ್ಳಲಿಲ್ಲ. ತುಸು ನೀರು ಕುಡಿಯಲು ಭೋಳೆಶಂಕರ ಬಂದ. ಪಿಶಾಚಿ ಅವನಿಗೆ ಪಾನಕ ಕೊಟ್ಟಿತು. ಅದರಲ್ಲಿ ನರಿರಕ್ತ ಸೇರಿಸಿತು. ತೋಳದ ರಕ್ತಬೆರೆಸಿತು. ಹಂದಿ ರಕ್ತ ಹಾಕಿತು. ಕುಡಿದು ಕ್ರೂರಿಯಾಗಲಿ, ತಂತ್ರಿಯಾಗಲಿ, ಕೊಚ್ಚೆಯಲ್ಲಿ ಬೀಳಲಿ, ಒದ್ದಾಡಲಿ ಎಂದಿತು. ಒದರಾಡಿ, ಉರುಳಾಡಲಿ ಎಂದು ಬಯಸಿತು. ನೋಡಿ ಸಂತೋಷಪಡಲು ತಯಾರಾಗಿತ್ತು.

ಶಿವನ ಹೆಸರು ಹೇಳುತ್ತ ಪಾನಕ ಕುಡಿದ. ಹೊಟ್ಟೆನೋವು ಕಾಣಿಸಿತು. ಹೊಟ್ಟೆ ಹಿಡಿದುಕೊಂಡ. ಪಿಶಾಚಿಗೆ ಖುಷಿಯಾಯಿತು. ಭೋಳೆಶಂಕರನಿಗೆ ಮತ್ತೆ ಏನೂ ಆಗಲೇ ಇಲ್ಲ. ಕೆಲಸ ಸುರು ಮಾಡಿದ. ಮರಿಪಿಶಾಚಿಗೆ ಭಾರೀ ಅಚ್ಚರಿ ಆಯಿತು. ತೊಟ್ಟು ಪಾನಕ ನರಕಕ್ಕೆ ಸಮ. ಭೋಳೆಶಂಕರ ಪಾತ್ರೆ ತುಂಬ ಪಾನಕ ಕುಡಿದಿದ್ದ. ಏನೂ ಆಗಿರಲೇ ಇಲ್ಲ. ಚೆನ್ನಾಗಿ ಕೆಲಸ ಮಾಡುತ್ತಿದ್ದ.

ಪಿಶಾಚಿ ವೇಷ ಬದಲಿಸಿತು. ಮನುಷ್ಯನ ವೇಷ ಹಾಕಿತು. ಅವನ ಮುಂದೆ ನಿಂತಿತು. ನಮಸ್ಕಾರ ಎಂದಿತು. ಭೋಳೆಶಂಕರನೂ ಶರಣು ಎಂದ. ದುಡಿದೂ ದುಡಿದೂ ದಣಿದಿದ್ದೀಯಾ ಎಂದಿತು. ಎರಡು ಎರಡೂ ಸೇರಿ ಐದು ಆಗುವ ಆಟ ಆಡಲು ಕರೆಯಿತು. ಭೋಳೆಶಂಕರನಿಗೆ ಅನುಮಾನ ಆಯಿತು. ಆ ಮನುಷ್ಯನ ಕೆಲಸ ಏನು ಎಂದು ಕೇಳಿದ. ಕೆಲಸ ಯಾಕೆ ಮಾಡಬೇಕು ? ಆಟ ಆಡಿದರೆ ಲಾಭ ಬರುತ್ತದೆ ಎಂದಿತು. ಆ ಮನುಷ್ಯ ಇಸ್ಪೀಟು ಎಲೆ ಹಾಕುವವ ಎಂದು ಖಾತ್ರಿ ಆಯಿತು. ಸಿಟಿಗಳಲ್ಲಿ ರಸ್ತೆ ಪಕ್ಕ ಕೂತು ಆಡುತ್ತಿದ್ದರಲ್ಲವೆ? ಕೂಡುವ ಆಟಕ್ಕೆ ಭೋಳೆಶಂಕರ ಬರಲಿಲ್ಲ. ಕಳೆಯುವ ಆಟಕ್ಕೆ ಕರೆಯಿತು. ಐದು ರೂಪಾಯಿ ಕೇಳಿತು. ಭೋಳೆಶಂಕರ ಕೊಡಲಿಲ್ಲ. ಕದೀತೀನಿ ಎಂದಿತು. ಭೋಳೆಶಂಕರ ರೇಗಿದ. ಕದ್ದರೆ ಕೈ ಮುರಿತೀನಿ ಎಂದ. ತೊಲಗು ಅಂದ. ಕಾಲು ಮುರಿಯುತ್ತೇನೆ ಅಂದ. ತಾನು ರಾಜನಾದರೆ ನಿಮ್ಮಂಥ ಸೋಂಬೇರಿಗಳಿಗೆ ಊಟ ಇಲ್ಲ ಅಂದ. ಮನುಷ್ಯನನ್ನು ತಿನ್ನುವವರು ಎಂದು ಬೈದ. ಅಂಥವರು ಇರುವ ದೇಶವನ್ನು ಶಿವನೇ

ಕಾಪಾಡಬೇಕು ಎಂದ. ಪಿಶಾಚಿ ಶಿವನ ಹೆಸರು ಕೇಳಿತು. ಅಯ್ಯೋ ಎಂದಿತು. ಕಿವಿ ಮುಚ್ಚಿಕೊಂಡಿತು. ಹೆದರಿ ಓಡಿತು.

ಭಯವು ನರಕದ ಮಾಲಿಕ

ಮೊದಲು ಎರಡು ಪಿಶಾಚಿಗಳಿಗೆ ಕೆಲಸ ಇರಲಿಲ್ಲ. ಭೂಲೋಕಕ್ಕೆ ಬಂದ ಕಾರ್ಯ ಮುಗಿದಿತ್ತು. ಕುಡಿದು ಕುಣಿದು ಕುಪ್ಪಳಿಸುತ್ತ ಇದ್ದವು. ಹಾಡಿ ಮೆರೆಯುತ್ತಿದ್ದವು. ಅವುಗಳ ಸಂತೋಷಕ್ಕೆ ಕಾರಣ ಇತ್ತು. ಅವರು ಗೆದ್ದಿದ್ದವು. ಇಬ್ಬರೂ ಅಣ್ಣಂದಿರು ಪೂರಾ ವಶ ಆಗಿದ್ದರು. ತೋರಿದವರ ಕರುಳು ಕಿತ್ತು ತಿನ್ನಲು ತಯಾರಿದ್ದರು. ಹೆಂಡಂದಿರನ್ನು ಕೊಂದುಹಾಕಲು ಸಿದ್ಧರಿದ್ದರು. ಪಿಶಾಚಿಗಳು ಹೇಳಿದಂತೆ ಕುಣಿಯುತ್ತಿದ್ದರು.



ರಾಜನು ಭೋಳೇಶಂಕರನ ಅಣ್ಣ ಪರದಾನಿಗೆ ಮೀಸೆ ಬೋಳಿಸುತ್ತಿರುವುದು

ಇವನ್ನೆಲ್ಲ ಸಲೀಸಾಗಿ ಸಾಧಿಸಿದ್ದವು. ಸರದಾರನಿಗೆ ಮೀಸೆ ಹುಲುಸಾಗಿ ಬೆಳೆಯಿತು. ಶೂರ, ಧೀರ ಎಂದು ಜಂಭಕೊಚ್ಚಿಕೊಂಡ. ಮೀಸೆ ತೀಡಿಕೊಳ್ಳುತ್ತಿದ್ದ. ಪಿಶಾಚಿ ಅವನನ್ನು ಒಬ್ಬ ರಾಜನ ಬಳಿಗೆ ಕಳಿಸಿತು. ರಾಜ ಇವನನ್ನು ಸೇನಾಪತಿ ಮಾಡಿದ. ಮೀಸೆ ಬೆಳೆಯುತ್ತಲೇ ಇತ್ತು. ಎಷ್ಟಪ್ಪಾ ಬೆಳೀತು ಅಂದರೆ ದೇಶವೇ ಕಾಣದಾಯ್ತು . ಕಂಡವರನ್ನು ತುಳಿದ. ಇಂಡಿಯಾದೇಶದ ರಾಜನ ಮೇಲೆ ದಂಡೆತ್ತಿ ಹೋದ. ಪಿಶಾಚಿ ಹುಲ್ಲಿನಿಂದ ಸೈನ್ಯ ತಯಾರಿಸಿ ಕೊಟ್ಟಿತು. ಆದರೆ ಕೊನೆಗೆ ಸೋತ. ಸೆರೆ ಸಿಕ್ಕಿದ. ರಾಜ ಅವನ ಮೀಸೆಗೆ ಮಣ್ಣು ಹಚ್ಚಿದ. ರಾಜನೇ ಖುದ್ದಾಗಿ ಅವನ ಮೀಸೆ ಬೋಳಿಸಿದ. ನಂತರ ಸೆರೆಮನೆಯಲ್ಲಿ ಇಟ್ಟ. ಸರದಾನನ್ನು ಕೊಲ್ಲುವ ಕೆಲಸ ಮಾತ್ರ ಬಾಕಿ ಇತ್ತು.

ಎರಡನೇ ಪಿಶಾಚಿಯೂ ಗೆದ್ದಿತ್ತು. ಅದು ಸಾವ್ಕಾರ ಡಬ್ಬುವನ್ನು ಸೆರೆ ಹಿಡಿದಿತ್ತು. ಹೊಟ್ಟೆ ಮತ್ತೂ ದೊಡ್ಡದು ಆಗಿತ್ತು. ಮೊದಲು ಐದೆಲೆ ಆಟ ಕಲಿಸಿತು. ಎರಡು ಎರಡು ಸೇರಿ ಐದು ಆಗುವದನ್ನು ಕಲಿಸಿತು. ಅವನ ಆಸೆ ಜಾಸ್ತಿ ಆಯ್ತು. ಮೋಸ ಮಾಡಿದ. ಕಳ್ಳತನ ಮಾಡಿದ. ಖೋಟಾನೋಟಿನ ದಂಧೆ ಸುರುವಾಯಿತು. ಅಂಥವನ ಹೆಂಡತಿ ಯಾವತ್ತು ಮುಂಡೆಯೇ ! ಬಯಸಿದಾಗ ಅವನನ್ನು ಕೊಲ್ಲಲು ಪಿಶಾಚಿ ರೆಡೀ ಇತ್ತು. ಮೂರನೆಯ ಪಿಶಾಚಿಗೆ ಕಷ್ಟ. ಅದಕ್ಕೆ ಚಿಂತೆ ಹಿಡಿದಿತ್ತು. ಏಟು ತಿಂದ ನಾಯಿಯ ಹಾಗೆ ಕೂತಿತ್ತು. ತನಗೆ ತಾನೇ ಉಗಿದುಕೊಳ್ಳುತ್ತ ಇತ್ತು. ಎರಡನೆಯದೂ ಅಲ್ಲಿಗೆ ಬಂದು ಥೂ ಎಂದು ಉಗಿಯುತು.

ಮರಿಪಿಶಾಚಿಗೆ ಬೆಪ್ತಕ್ಕಡಿಯ ಸಹವಾಸ ಸಾಕು ಎನಿಸಿತ್ತು. ಯಾವ ಪಟ್ಟೂ ನಡೆಯಲಿಲ್ಲ. ಆತ ನುಣುಚಿಕೊಳ್ಳುತ್ತಿದ್ದ. ಪಿಶಾಚಿ ಚಾಪೆ ಕೆಳಗೆ ನುಗ್ಗಿದರೆ, ಆತ ರಂಗೋಲಿ ಕೆಳಗೆ ನುಸುಳುತ್ತ ಇದ್ದ. ಅಪ್ಪ ಎಂದರೆ ನಿಮ್ಮಮ್ಮ ಎಂತಿದ್ದ. ಸೊಪ್ಪು ಹಾಕುತ್ತಿರಲಿಲ್ಲ. ಬದುಕಿನ ಬಗ್ಗೆ ತಕರಾರು ಮಾಡುತ್ತಿರಲಿಲ್ಲ. ಸಿಟ್ಟಿಗೆ ಏಳುತ್ತಿರಲಿಲ್ಲ. ಆಗಾಗ ಶಿವನನ್ನು ಸ್ಮರಿಸುತ್ತಿದ್ದ. ಅವನ ಬಳಿಗೆ ಹೋಗುವುದೇ ಪಿಶಾಚಿಗೆ ಕಷ್ಟವಾಗಿತ್ತು.

ಬೆಪ್ತಕ್ಕಡಿ ದೇವತೆಯ ಹಾಗಿನವ ಎಂದು ಮೊದಲಿಗೆ ತಿಳಿದಿರಲಿಲ್ಲ. ಈಗ

ಸೋತಿತ್ತು. ಸೈತಾನನಿಗೆ ತಿಳಿದರೆ ಅಪಾಯ. ಅಣ್ಣಂದಿರು ಗೆದ್ದಿದ್ದರು. ಇದಕ್ಕೆ ಬದುಕುವ ಉಪಾಯವೇ ಇರಲಿಲ್ಲ. ಉಳಿದ ಪಿಶಾಚಿಗಳ ಸಲಹೆ ಕೇಳಿತು. ಅವರಿಗೆ ಉಪಾಯ ಹೊಳೆಯಿತು. ಸರದಾರನನ್ನೂ ಸಾವ್ಕಾರನನ್ನೂ ಬೆಪ್ಪತಕ್ಕಡಿ ಬಳಿಗೆ ಕಳಿಸಲು ಯೋಚಿಸಿದವು. ಬೆಪ್ಪತಕ್ಕಡಿಯ ನೆಮ್ಮದಿ ನೋಡಿ ಅಣ್ಣಂದಿರಿಗೆ ಉರಿ ಆಗುತ್ತದೆ. ಜಗಳ ಆಡುತ್ತಾರೆ. ಬೆಪ್ಪತಕ್ಕಡಿಯೂ ರೇಗುತ್ತಾನೆ. ಶಾಪಹಾಕುತ್ತಾನೆ. ಕೆಟ್ಟಮಾತು ಆಡುತ್ತಾನೆ. ಪಿಶಾಚಿಗಳ ಸೀಮೆಗೆ ಬರುತ್ತಾನೆ ಎಂದು ಎಣಿಸಿದವು. ಬೆಪ್ಪತಕ್ಕಡಿಯ ಶಕ್ತಿ ಅವಕ್ಕೆ ತಿಳಿದಿರಲಿಲ್ಲ. ಗೆಲ್ಲುವ ಭರವಸೆ ಆಯಿತು. ಸಹಾಯ ಮಾಡುವ ಮಾತು ಕೊಟ್ಟವು. ಬೆಪ್ಪತಕ್ಕಡಿಯ ಕಥೆ ಮುಗಿಯಿತು ಎಂದು ನಂಬಿದವು. ಮೂರೂ ಕುಣಿದು ಕುಪ್ಪಳಿಸಿದವು.

ಭೋಂ ಭೋಂ ಭೋಳೆಶಂಕರ

ಬೋಳೆಶಂಕರ ಹೊಲದಲ್ಲಿ ಕೆಲಸ ಮಾಡುತ್ತ ಇದ್ದ. ಜತೆಗೆ ಕೋಡಂಗಿ ಇದ್ದ. ಈ ಕೋಡಂಗಿ ಮನೆಯ ಕೆಲಸದ ಆಳು. ಮಾಡುವ ಕೆಲಸ ಅಷ್ಟಕ್ಕಷ್ಟೆ. ಅವನ ಕಥೆ ಕೇಳಿ ಜನ ನಗುತ್ತಿದ್ದರು. ಕೆಲವು ಸಲ ಉಗಿದು ಉರಿಯುತ್ತಿದ್ದರು. ತುಂಬ ಹೆಸರುವಾಸಿ ಆಗಿದ್ದ.

ಕೋಡಂಗಿ ಅವತ್ತು ಬೆಪ್ಪತಕ್ಕಡಿ ಜತೆ ಇದ್ದ. ಬೆಪ್ಪತಕ್ಕಡಿ ತುಸೂ ಹೊಟ್ಟೆ ನೋವು ಅಂತಿದ್ದ. ಆರಾಂ ತೆಗೆದುಕೊಳ್ಳಲು ಕೋಡಂಗಿ ಒತ್ತಾಯಿಸುತ್ತಿದ್ದ. ಆರಾಂ ಹರಾಂ ಹೈ ಗಾದೆ ಬೆಪ್ಪತಕ್ಕಡಿಗೆ ಗೊತ್ತಿತ್ತು. ಆತ ಕೆಲಸ ಬಿಟ್ಟು ಕುಳಿತಿರಲಿಲ್ಲ. ಕೆಲಸಮಾಡದಿದ್ದರೆ ಜೀವನ ನಡೆಯುವದಿಲ್ಲ. ಅವನ ಕೆಲಸವನ್ನು ಅವನೇ ಮಾಡಬೇಕು. ಕೆಲಸ ಮಾಡಿದವರಿಗೆ ಮಾತ್ರ ಉಣ್ಣುವ ಹಕ್ಕು, ಕೋಡಂಗಿ ಸೊಂಬೇರಿ. ತುಂಡು ರೊಟ್ಟಿಗೆ ಅಯೋಗ್ಯ.

ಅಷ್ಟರಲ್ಲಿ ಪುಟ್ಟ ಪಿಶಾಚಿ ಅಲ್ಲಿಗೆ ಬಂತು. ಭೋಳೆಶಂಕರನನ್ನು ಕಂಡು ಕಣ್ಣು ಬೇನೆ ಬಂತು. ಹೊಟ್ಟೆನೋಯುತ್ತಿದ್ದರೂ ಕೆಲಸ ಮಾಡುತ್ತಿದ್ದ. ಅವನ ನೆಮ್ಮದಿಯೇ ಪಿಶಾಚಿಗೆ ದೊಡ್ಡ ಅಡ್ಡಿ. ಪಿಶಾಚಿಯ ದಡ್ಡತನವನ್ನು ಬಯಲು ಮಾಡುತ್ತಿದ್ದ. ಆದರೂ ಅದು ಸೋಲೊಪ್ಪಲು ತಯಾರಿಲ್ಲ. ಉಳುವ ನೇಗಿಲಿಗೆ ಬೇರಾಗಿ ಸಿಕ್ಕಲು ಹೊಂಚಿತು. ಬಿಡಿಸಿಕೊಳ್ಳುವ ಬಗೆಯನ್ನು ನೋಡಲು ಹವಣಿಸಿತು. ಪಿಶಾಚಿ ಮಾಯವಾಯಿತು. ನೇಗಿಲು



ಕೊಡಂಗಿ ತನ್ನ ಕೆಲಸದಲ್ಲಿ ನಿರತನಾಗಿರುವುದು

ನಿಂತಿತು. ಭೋಳೆಶಂಕರನಿಗೆ ಅಚ್ಚರಿ ! ಕೋಡಂಗಿಯನ್ನು ಕರೆದ. ಅವನಿಗೂ ತೋರಿಸಿದ. ಅಕ್ಕಪಕ್ಕ ಮರ ಇರಲಿಲ್ಲ. ಹಿಂದೆಯೂ ಇರಲಿಲ್ಲ. ನೇಗಿಲಿಗೆ ಬೇರು ಸಿಕ್ಕಿಕೊಂಡಿತ್ತು. ಹೇಗೆ?

ಕೋಡಂಗಿ ಗುದ್ದಲಿ ತಂದ. ಇಬ್ಬರೂ ಸೇರಿ ಅಗೆದರು. ಕೋಡಂಗಿ, ರಾಜಾ ಐಸಾ ಎಂದ. ಭೋಳೆಶಂಕರ ಅಗೆದ. 'ಅಯ್ಯೊ. ಹಾವು ! ಹಾವು ! ಎನ್ನುತ್ತ ಕೋಡಂಗಿ ದೂರ ಓಡಿದ.

ಭೋಳೆಶಂಕರ ಎತ್ತಿ ತೆಗೆದ. ವಿಚಿತ್ರ ಪ್ರಾಣಿ. ಒದ್ದಾಡುತ್ತಿತ್ತು. ಶಿವ ಶಿವ ಎಂದ.

'ಅಯ್ಯಯ್ಯೊ ಆ ಹೆಸರು ಎತ್ತಬೇಡ, ಕೈ ಮುಗಿತೀನಿ' ದನಿ ಕೇಳಿಸಿತು. ಅರೆ! ಮಾತನ್ನು ಆಡುತ್ತಿದೆಯಲ್ಲ ! ಕೋಡಂಗಿ ಚಕಿತನಾದ. ತನ್ನ ಹೆಸರು ಕೇಳಿ ಹೆದರುತ್ತದೆ

ಎಂದುಕೊಂಡ. ಆದರೆ ಪಿಶಾಚಿ ಶಿವನ ಹೆಸರು ಕೇಳಿ ಹೆದರಿತ್ತು. ಭೋಳೆಶಂಕರ ಶಿವನ ನಾಮ ಪಠಿಸಿದ. ಪಿಶಾಚಿ ಅರಚಿತು. ಹೇಳಬೇಡ ಎಂದು ಬೇಡಿಕೊಂಡಿತು. ಹೇಳಿದ ಕೆಲಸ ಮಾಡುವ ಮಾತು ಕೊಟ್ಟಿತು. ತನ್ನ ಹೊಟ್ಟೆನೋವು ವಾಸಿಮಾಡಲು ಹೇಳಿದ. ಪಿಶಾಚಿ ತಟ್ಟನೆ ಹೋಯಿತು. ನೆಲ ಅಗೆಯಿತು. ಮೂರು ಬೇರು ತಂದಿತು. ನುಂಗಲು ಹೇಳಿತು. ಭೋಳೆಶಂಕರ ಹಾಗೇ ಮಾಡಿದ. ಹೊಟ್ಟೆ ನೋವು ವಾಸಿಯಾಯಿತು. ಎಲ್ಲ ರೋಗ ಗುಣ ಮಾಡುವ ಶಕ್ತಿ ಆ ಬೇರಿಗೆ ಇತ್ತು. ಪಿಶಾಚಿ ಹೋಗಲು ಅಪ್ಪಣೆ ಬೇಡಿತು. ಭೋಳೆಶಂಕರ ಶಿವನ ನಾಮಸ್ಮರಣೆ ಮಾಡಿದ. ಪಿಶಾಚಿ ಒದ್ದಾಡಿತು. ಕೋಡಂಗಿಯೂ ಶಿವನ ಹೆಸರು ಹೇಳಿದ. ಶಿವ, ಶಿವ, ಶಿವ, ಭೋಳೆಶಂಕರ, ಸಾಂಬಸದಾಶಿವ, ಭೋಂ ಭೋಂ ಭೋಳೆಶಂಕರ, ಪಾರ್ವತಿ ಶಂಕರ ಎಂದ. ಪಿಶಾಚಿಗೆ ಕೇಳಲು ಆಗಲಿಲ್ಲ. ಕಿವಿ ಮುಚ್ಚಿಕೊಂಡಿತು. ನೆಲದಲ್ಲಿ ಅವಿತುಕೊಂಡಿತು.

ಹಸಿರು ಸಾಮ್ರಾಜ್ಯದ ನಮ್ರ ಪ್ರಜೆ

ಭೋಳೆಶಂಕರನ ಅಡಿಗೆ ಮನೆಯಲ್ಲಿ ಅಡಿಗೆ ಸುರು ಆಗಿತ್ತು. ಅಲ್ಲಿ ಸರದಾರ ಸೋಮಣ್ಣ ಇದ್ದ. ಡಬ್ಬೂ ಸಾವುಕಾರನೂ ಬಂದಿದ್ದ. ಇಬ್ಬರು ಹೆಂಗಸರೂ ಹಾಜರಾಗಿದ್ದರು. ಸಂಭ್ರಮದಿಂದ ಅಡಿಗೆಗೆ ತೊಡಗಿದ್ದರು. ಚಕ್ಕುಲಿ, ಕೋಡುಬಳೆ, ಕರಜೀಕಾಯಿ, ಹೋಳಿಗೆ, ಲಾಡು, ಜಿಲೇಬಿ ತಯಾರಾಗಿದ್ದವು. ಮೆಲ್ಲಲು ಸಜ್ಜಾಗಿದ್ದರು. ಎರಡು ಪಿಶಾಚಿಗಳು ಅಲ್ಲಿ ಹಾಜರಾಗಿದ್ದವು. ಅವರ ಕೆಲಸ ಸಾಗಿತ್ತು. ಸರದಾರನ ಹೆಂಡತಿಯ ಬಾಯಲ್ಲಿ ಕೋರೆ ಹಲ್ಲು ಮೂಡಿಸಿದ್ದವು. ಜೊಲ್ಲಿಗೆ ವಿಷ ಬೆರೆಸಬೇಕಾಗಿತ್ತು. ಡಬ್ಬು ಸಾವ್‌ಕಾರನ ಹೆಂಡತಿಗೆ ಕೊಂಬು ಮೂಡಿದ್ದವು. ಕೊಂಬಿನಲ್ಲಿ ಚೂರಿ ಇಡುವ ಕೆಲಸ ಆಗಬೇಕಿತ್ತು. ಗಂಡಸರ ಬಾಯಲ್ಲಿ ಮದ್ದಿಡಬೇಕು. ಹೆಂಗಸರ ಕೈಯಲ್ಲಿ ಬೆಂಕಿ ಇಡಬೇಕು. ಕಿಡಿ ತಾಗಿಸಬೇಕು. ಬೆಪ್ಪುತಕ್ಕಡಿ ನರಕದ ಶಾಪಗಳನ್ನು ಸುರಿಸಬೇಕು. ಗಳಿಗೆಯಲ್ಲಿ ಮನೆ ಮಸಣ ಆಗಬೇಕು. ಪರಸ್ಪರ ಮಾತನಾಡಿಕೊಂಡವು.

ಭೋಳೆಶಂಕರ ಬಂದ. ಗಳೇ ಸಾಮಾನು ತಂದ. ಪಿಶಾಚಿಗಳು ಕಂಡವು. ಹುಷಾರಾಗಿ ಇದ್ದವು. ಸರದಾರ ತಮ್ಮನನ್ನು ಪ್ರಿತಿಯಿಂದ ಮಾತಾಡಿಸಿದ. ತಮ್ಮನ ಜೊತೆ

ಇರಲು ಬಂದೆ ಅಂದ. ಇದ್ದ ಕೆಲಸ ಹೋಯ್ತು, ಇನ್ನೊಂದು ಸಿಗುವವರೆಗೆ ಇರುವೆ ಎಂದ. ಹೆಂಡತಿಗೂ ನೀನೇ ದಿಕ್ಕು ಎಂದು ಹಲ್ಲುಗಿಂಜಿದ. ಡಬ್ಬು ಸಾವ್ಕಾರ ತಮ್ಮನ ಕುಶಲ ವಿಚಾರಿಸಿದ. ಆತ ಮತ್ತೆ ಆಸ್ತಿ ಕೇಳಲಿಕ್ಕೆ ಬಂದಿರಲಿಲ್ಲ. ದೊಡ್ಡ ಮನಸ್ಸು ಮಾಡಬೇಕು ಅಂದ. ಸಾಚಾತನ ತೋರಿದ. ಸರದಾರನ ಹೆಂಡತಿಯೂ ಹೇಳಿದಳು. ತನ್ನ ಗಂಡ ಸೇನಾಪತಿಯಾಗಿ ಆಳಿದವ. ಡಬ್ಬು ಸಾವ್‌ಕಾರ ಸರಕಾರ ಕೊಂಡು ಮಾರಿದವ. ಭೋಳೆಶಂಕರ ಅವರ ಸೇವೆಮಾಡಬೇಕು. ಅವನು ಧನ್ಯನಾಗುತ್ತಾನೆ. ಅವಕಾಶ ತಾನಾಗೇ ಬಂದಿದೆ. ಅವಳು ಹೇಳಿದಳು. ಭೋಳೆಶಂಕರನಿಗೆ ಹೆಂಡತಿ–ಸಂಸಾರ ಇರಲಿಲ್ಲ. ಈ ಜನ್ಮದಲ್ಲಿ ಮದುವೆ ಆಗದು. ಹೆಂಗಸರು ಅಡಿಗೆ ಮಾಡಿಹಾಕುತ್ತಾರೆ. ಕೂತು ತಿನ್ನುವದಿಲ್ಲ.

ಭೋಳೆಶಂಕರ ಒಪ್ಪಿಕೊಂಡ. ಅನ್ನ ಬೇಯಿಸಲು ಯಾರೂ ಇರಲಿಲ್ಲ. ಹೆಂಗಸಿನ ಕೈ ಅನ್ನ ಉಣ್ಣಬಹುದು. ಅತ್ತಿಗೆ ಅದನ್ನೇ ಹೇಳಿದ್ದಳು. ಅವನಿಗೆ ಸಂತೋಷವಾಯಿತು. ಎಲ್ಲರೂ ಜೊತೆಗೆ ಇರೋಣ ಅಂದ. ಗಳೇ ಸಾಮಾನು ಇಡಲು ಹೋದ.



ಭೋಳೆಶಂಕರ ಅತ್ತಿಗೆಯ ಹತ್ತಿರ ಊಟ ಕಟ್ಟಿಸಿಕೊಂಡು ಉಣ್ಣಲು ತೋಟಕ್ಕೆ ಹೋಗುತ್ತಿರುವುದು

ಊಟಕ್ಕೆ ರೆಡಿಯಾಗಿ ಬಂದ. ಅಣ್ಣಂದಿರನ್ನೂ ಖುಷಿಯಿಂದ ಕರೆದ. ತನ್ನ ಬದುಕಿನ ಸುದಿನ ಎಂದುಕೊಂಡ. ಹೆಣ್ಣು ಇದ್ದ ಮನೆ ಚೆಂದ ಅಂದ. ಅಡಿಗೆ ಮನೆಯಲ್ಲಿ ಆಗಲೇ ಪರಿಮಳ ತುಂಬಿತ್ತು. ಊಟಕ್ಕೆ ಕುಳಿತ. ಆದರೆ ಅವನಿಗೆ ಊಟ ಬಡಿಸಲಿಲ್ಲ. ಕೊಟ್ಟಿಗೆಯಲ್ಲಿ ಕುಳಿತು ಊಟ ಮಾಡಲು ಹೇಳಿದರು. ಮೈನಾರುತ್ತದೆ ಎಂದರು. ಭೋಳೆಶಂಕರ ಕೊಟ್ಟಿಗೆಯಲ್ಲಿ ಕುಳಿತು ಊಟ ಮಾಡಲು ಒಪ್ಪಿಕೊಂಡ. ಊಟ ಕಟ್ಟಿಕೊಡಿ ತೋಟದಲ್ಲೇ ಉಣ್ಣುತ್ತೇನೆ. ಅಲ್ಲೇ ಮಲಗುತ್ತೇನೆ ಎಂದ. ಎಲ್ಲರೂ ಒಪ್ಪಿದರು.

ಬುತ್ತಿಕಟ್ಟಿಕೊಂಡು ಹೊರಟ. ಬೆಳಗ್ಗೆ ಎದ್ದು ಮರಕಡಿಯಲು ಡಬ್ಬು ಹೇಳಿದ. ಮನೆಕಟ್ಟಿಕೊಳ್ಳಲು ಬೇಕಾಗಿತ್ತು. ಸರದಾರ ತನ್ನ ಕುದುರೆಗೆ ಹುಲ್ಲುತರಲು ಹೇಳಿದ. ಭೋಳೆಶಂಕರ ಆಗಲಿ ಎಂದು ಹೊರಟ. ಅವನ ಹಿಂದೆ ಕೋಡಂಗಿಯೂ ಹೊರಟ. ಕೋಡಂಗಿಗೆ ಚಿಂತೆಯಾಗಿತ್ತು. ಭೋಳೆಶಂಕರನ ಪುಣ್ಯದ ಕೆಲಸಗಳಿಗೆ ಮನ್ನಣೆ ಇರಲಿಲ್ಲ. ಎಲ್ಲ ದಂಡವಾಗುತ್ತಿತ್ತು. ಅದಕ್ಕಾಗಿ ಕೋಡಂಗಿಗೆ ಬೇಸರವಾಗಿತ್ತು. ಊಟವೇ ಬೇಡ ಎನ್ನಿಸಿತ್ತು. ಆ ಅಣ್ಣಂದಿರ ನಡತೆ ಕೋಡಂಗಿಗೆ ಸರಿ ಕಂಡಿರಲಿಲ್ಲ. ಭೋಳೆಶಂಕರನ ಹಣವನ್ನು ಅವರು ದುಂದು ಮಾಡುತ್ತಿದ್ದರು. ಅದಕ್ಕಾಗಿ ಅವನೂ ಗೆಳೆಯನ ಜತೆ ತೋಟದಲ್ಲಿ ಮಲಗಲು ಹೊರಟಿದ್ದ. ಆದರೆ ಭೋಳೆಶಂಕರ ತಲೆಕೆಡೆಸಿಕೊಳ್ಳಲಿಲ್ಲ. ಆತ ಆ ಸಂಗತಿಗೆ ಗಮನ ಕೊಡಲೂ ಇಲ್ಲ. ಕೋಡಂಗಿಗೆ ಸುತ್ತಲಿನ ಹಸಿರು ತೋರಿಸಿದ. ಹಸಿರನ್ನು ಹೆಚ್ಚು ಪ್ರೀತಿಸಿದ. ತನ್ನ ಒಳಮನಸ್ಸನ್ನು ತೆರೆದ. ಹೃದಯ ತಿಳಿಗೊಳದ ಹಾಗೆ ಆಯಿತು. ಅಲ್ಲಿ ಚಂದ್ರ ಮೂಡಿದ ಹಾಗೆ ನಿಚ್ಚಳ ಆಯಿತು. ಕೋಡಂಗಿಗೆ ಅನುಮಾನ ಆಯಿತು. ಗೆಳೆಯ ಏನೇನೋ ಮಾತಾಡಿದ್ದ. ಅವನಿಗೂ ಪಿಶಾಚಿ ಕಾಡತೊಡಗಿರಬಹುದೆ ?

ಇಬ್ಬರೂ ಮಾತನಾಡದೆ ಹೊರಟರು. ಮರೆಯಾದರು. ನಿರಾಶೆಗೊಂಡ ಪಿಶಾಚಿಗಳು ಹಾಜರಾದವು. ಜಗಳ ಆಗಬಹುದು ಎಂದು ಎಣಿಸಿದ್ದವು. ಆಗಲೇ ಇಲ್ಲ. ಹೊಸ ಉಪಾಯ ಯೋಚಿಸಿದವು. ಮೊದಲ ಪಿಶಾಚಿ ರಾಜಕುಮಾರಿಯನ್ನು ಹಿಡಿಯಲು ನಿರ್ಧರಿಸಿತು. ಹೊಟ್ಟೆನೋವು ಬರುವ ಹಾಗೆ ಮಾಡಲು ಬಗೆದವು. ಪಿಶಾಚಿ ಹೊಟ್ಟೆ ನೋವಿಗೆ ಕೊಟ್ಟ ಬೇರಿತ್ತು. ರಾಜಕುಮಾರಿಯ ರೋಗವಾಸಿ ಮಾಡಲು ಬೆಪ್ತಕ್ಕಡಿ ಹೋಗೇ ಹೋಗುತ್ತಾನೆ. ದಾರಿಯಲ್ಲಿ ವೇಷ ಮರೆಸಿ, ಬೇರನ್ನು ಕಿತ್ತುಕೊಳ್ಳುವುದು. ಆಗ ಆತ ರೋಗ

ವಾಸಿಮಾಡಲಾರ. ರಾಜನಿಂದ ಅವನ ಕತ್ತು ಕೊಯ್ಯಿಸಿ ಹಾಕುವದು ಎಂದು ನಿಗದಿ ಆಯಿತು. ಉಪಾಯ ಚೆನ್ನಾಗಿತ್ತು. ಪಿಶಾಚಿಗಳು ಉಬ್ಬಿಹೋದವು. ತಡಮಾಡದೆ ಹೊರಟವು.

ಎಲ್ಲರಂಥವಳಲ್ಲ ನಮ್ಮಾಕಿ

ಕೋಡಂಗಿ ಹಾಡಿ ಹಾಡಿ ಕುಣಿಯುತ್ತಿದ್ದ. ಅವನ ಸಂತೋಷಕ್ಕೆ ಕಾರಣ ಇತ್ತು. ಆತ ಡಂಗುರ ಕೇಳಿದ್ದ. ರಾಜಕುಮಾರಿಗೆ ಹೊಟ್ಟೆನೋವು. ವಾಸಿಮಾಡಿದವರಿಗೆ ಭಾರಿ ಬಹುಮಾನ ಉಂಟು, ಎಂದು ಡಂಗುರ ಸಾರಿದ್ದರು. ಪಿಶಾಚಿ ಕೊಟ್ಟ ಬೇರು ಭೋಳೆಶಂಕರನ ಬಳಿ ಇತ್ತು. ಅವನಿಗೆ ನೆನಪಿರಲಿಲ್ಲ. ಕೋಡಂಗಿ ನೆನಪಿಸಿದ. ಆ ಬೇರನ್ನು ಗೆಳೆಯನಿಂದ ಪಡೆಯಬೇಕು, ಅರಮನೆಗೆ ಹೋಗಿ ರಾಜಕುಮಾರಿಗೆ ಕೊಡಬೇಕು. ಅವಳ ಹೊಟ್ಟೆನೋವನ್ನು ವಾಸಿಮಾಡಬೇಕು, ಭಾರಿಬಹುಮಾನ ಗಿಟ್ಟಿಸಬೇಕು ಎಂದು ಯೋಚಿಸಿದ್ದ. ಬಹುಮಾನದಲ್ಲಿ ಗೆಳೆಯನಿಗೂ ಅಷ್ಟು ಕೊಟ್ಟರಾಯಿತು. ಗೆಳೆಯ ಕೈ ಬಿಡಲಾರ. ದೊಡ್ಡ ಮನಸ್ಸನ್ನು ಮಾಡುತ್ತಾನೆ. ಬೇರು ಕೊಡುತ್ತಾನೆ ಎಂದು ನಂಬಿದ್ದ.

ಭೋಳೆಶಂಕರನೂ ಬೇರು ಕೊಡಲು ಒಪ್ಪಿದ. ಕೋಡಂಗಿಗೆ ಸಣ್ಣ ಸಮಸ್ಯೆ ಇತ್ತು. ರೋಗ ವಾಸಿಮಾಡಿದವರಿಗೆ ರಾಜಕುಮಾರಿಯನ್ನು ಮದುವೆ ಮಾಡಿಕೊಡುವುದು ರೂಢಿ. ಹಾಗೇನಾದರೂ ಆದರೆ? ಹೇಗೆ ಮಾಡುವುದು ? ಗೆಳೆಯನಿಗೆ ಬಹುಮಾನದಲ್ಲಿ ಪಾಲು ಬೇರೆ ಕೊಡಬೇಕು. ಕೋಡಂಗಿಯ ತಲೆ ಅಷ್ಟು ಓಡಿತ್ತು. ಭೋಳೆಶಂಕರನಿಗೆ ಭಲೇ ಅನ್ನಿಸಿತು. ಅವನಿಗೆ ಪ್ರತಿಫಲ ಬೇಕಿರಲಿಲ್ಲ. ಕೋಡಂಗಿಯೇ ಹೋಗಲಿ, ರಾಜಕುಮಾರಿಯ ರೋಗ ವಾಸಿಮಾಡಲಿ ಎಂದು ಬಯಸಿದ. ಕೋಡಂಗಿಯ ಆತಂಕ ಹೋಯಿತು.


ಒಬ್ಬ ಮುದುಕಿ ಬಂದಳು. ಅವಳಿಗೆ ಹೊಟ್ಟೆನೋವು. ಭೋಳೆಶಂಕರ ಬೇರು ಕೊಟ್ಟ. ಶಿವನ ಹೆಸರು ಹೇಳಿದ. ಮುದುಕಿ ಅರಚಿಕೊಂಡಳು. ಕೋಡಂಗಿ ಬಿಡಲಿಲ್ಲ. ಶಿವನ ನಾಮಸ್ಮರಣೆ ಮಾಡಿದ. ಮುದುಕಿ ರೂಪ ಹೋಗಿ ಪಿಶಾಚಿ ರೂಪ ಬಂತು. ಇದು ಎರಡನೆ ಪಿಶಾಚಿ. ಭೋಳೆಶಂಕರ ಶಿವನ ನಾಮಸ್ಮರಣೆ ಮಾಡಿದ. ಪಿಶಾಚಿ ದಮ್ಮಯ್ಯ ಹಾಕಿತು. 'ನ್ನು ನಾಣ್ಯ ಮಾಡುವ, ಧಾನ್ಯ ಮಾಡುವ ಮಂತ್ರ ಹೇಳಿಕೊಟ್ಟಿತು. ಕೋಡಂಗಿ ಭೋಂ ಭೋಂ ಶಂಕರ ಭೋಳೆಶಂಕರ ಅಂದ. ಪಿಶಾಚಿ ಸತ್ತುಹೋಯಿತು.



ಅಜ್ಜಿಯ ವೇಶದಲ್ಲಿದ್ದ ಪಿಶಾಚಿಗೆ ಭೋಳೆಶಂಕರ ಹೊಟ್ಟೆನೋವಿನ ಔಷಧಿ ಕೊಡುತ್ತಿರುವುದು

ಸಿಕ್ಕಳಾ ರಾಜಕುಮಾರಿ

ರಾಜಕುಮಾರಿ ಹೊಟ್ಟೆ ಹಿಡಿದು ಮಲಗಿದ್ದಳು. ವಾಸಿ ಮಾಡಿದವರಿಗೆ ಅರ್ಧರಾಜ್ಯ ಎಂದು ರಾಜ ಡಂಗುರ ಸಾರಲು ಹೇಳಿದ. ಮಂತ್ರಿ ಡಂಗುರ ಸಾರಿದ. ನೋವು ಹೆಚ್ಚಾಯಿತು. ರಾಜಕುಮಾರಿ ತನಗೆ ವಿಷಕೊಡಿ ಅಂದಳು. ಆಗ ರಾಜ ಮಂತ್ರಿಯನ್ನು ಕರೆದ.




ಭೋಳೆಶಂಕರನು ರಾಜಕುಮಾರಿಗೆ ಹೊಟ್ಟೆನೋವಿನ ಔಷಧಿಯನ್ನು
ಕೊಡಲು ಹೋದಾಗ ಪಿಶಾಚಿ ಮಂಚದ ಕೆಳಗೆ ಅಡಗಿ ಕೊಂಡಿರುವುದು

ವಾಸಿ ಮಾಡಿದವರಿಗೆ ಮಗಳನ್ನು ಕೊಡುವ ಡಂಗುರಕ್ಕೆ ಹೇಳಿದ. ಅಷ್ಟರಲ್ಲಿ ಸೇವಕ ಬಂದ. ಭೋಳೆಶಂಕರ ಬಂದ ಎಂದು ನಿವೇದಿಸಿದ. ಅವನ ಹತ್ತಿರ ಮದ್ದಿದೆಯಂತೆ ಅಂದ. ಮಂತ್ರಿಗೆ ಇಷ್ಟ ಇರಲಿಲ್ಲ. ರಾಜಕುಮಾರಿಗೆ ಮಾತ್ರ ಕುತೂಹಲ ಚಿಗುರಿತು. ಬೆಪ್ತಕ್ಕಡಿ ಹೆಸರು ಮೋಜು ಎನಿಸಿತು. ರಾಜ ಅವನನ್ನು ಕರೆತರಲು ಸೇವಕನಿಗೆ ಹೇಳಿದ. ಭೋಳೆಶಂಕರ, ಕೋಡಂಗಿ ಬಂದರು. ಮದ್ದು ಕೊಡಲು ಹೇಳಿದ. ಭೋಳೇಶಂಕರ ಬೇರು ಕೊಟ್ಟ. ಜಗಿದು ನುಂಗಲು ಹೇಳಿದ. ಶಿವನ ಹೆಸರು ಹೇಳಿದ. ಒಳಿತನ್ನು ಹಾರೈಸಿದ.

ಹಾಸಿಗೆಯ ಕೆಳಗೇ ಪಿಶಾಚಿ ಇತ್ತು. ಶಿವನ ಹೆಸರು ಕೇಳಿ ಚಡಪಡಿಸಿತು. ಹೇಳ ಬೇಡಿ ಎಂದು ಅರಚಿತು. ಎಲ್ಲರೂ ಅಚ್ಚರಿಪಟ್ಟರು. ಪಿಶಾಚಿ ನಡುಗುತ್ತ ಹೊರಗೆ ಬಂತು. ಮಂತ್ರಿ ಮತ್ತು ಸೇವಕ ಹೆದರಿ ಓಡಿದರು. ರಾಜ ಎಚ್ಚರ ತಪ್ಪಿ ಬಿದ್ದ. ಭೋಳೆಶಂಕರನಿಗೆ ಸಿಟ್ಟು ಬಂತು. ಅನಿಷ್ಟ ಮತ್ತೆ ಬಂದಿತ್ತು. ಇದು ಬೇರೆ ಪಿಶಾಚಿ. ಸರದಾರನ ಬೆನ್ನು ಹತ್ತಿದ್ದು ಇದಕ್ಕೆ ಗತಿ ಕಾಣಿಸಬೇಕು. ಪಿಶಾಚಿ ಗಡ ಗಡ ನಡುಗಿತು. ದಮ್ಮಯ್ಯ ಹಾಕಿತು. ಬಿಟ್ಟುಬಿಡಲು ಬೇಡಿಕೊಂಡಿತು. ತಂಟೆಗೇ ಬರುವದಿಲ್ಲ ಎಂದು ಗೋಗರೆಯಿತು. ಬೇಕಾದ ಸಹಾಯ ಮಾಡಲು ಮುಂದಾಯಿತು. ಹಾಡುವ, ಕುಣಿಯುವ ಪೇದೆಗಳನ್ನು ಮಾಡಿಕೊಡುವೆ ಎಂದಿತು.

ಕೋಡಂಗಿ ಕುದುರೆ ಲಾಯದಿಂದ ಹುಲ್ಲು ತಂದ. ಪಿಶಾಚಿ ಹುಲ್ಲನ್ನು ನಿಲ್ಲಿಸಿತು. ಮಂತ್ರ ಹೇಳಿತು. ಹುಲ್ಲಿನ ಎಸಳಿನಿಂದ ಒಬ್ಬೊಬ್ಬ ಪೇದೆ ಹೊರಗೆ ಬಂದ. ಭೋಳೆಶಂಕರ ತಲೆ ತೂಗಿದ. ಚೆಂದದ ಆಟ. ಇದನ್ನು ತೋರಿಸಿದರೆ ಮಕ್ಕಳಿಗೆ ಖುಷಿ



ಅರಮನೆಯಲ್ಲಿ ಮಂಚದ ಕೆಳಗಿದ್ದ ಪಿಶಾಚಿ ಭೋಳೆಶಂಕರನ
ಶಿವ ಸ್ಮರಣೆಯನ್ನು ಕೇಳಿದಾಗಲೇ ಸತ್ತುಹೋಗಿರುವುದು

ಆಗುತ್ತದೆ ಎಂದುಕೊಂಡ. ಅವನಿಗೆ ಒಳ್ಳೆ ಹುಲ್ಲು ಹಾಳಾಗುವುದು ಇಷ್ಟ ಇರಲಿಲ್ಲ. ಪೇದೆಗಳನ್ನು ಮತ್ತೆ ಹುಲ್ಲು ಮಾಡಲು ಹೇಳಿದ. ಪಿಶಾಚಿ ಮಂತ್ರವನ್ನು ತಿರುಗಾ ಮುರುಗಾ ಹೇಳಿತು. ಪೇದೆಗಳು ಹುಲ್ಲಾದರು. ಕೋಡಂಗಿ ಶಿವನ ನಾಮಸ್ಮರಣೆ ಮಾಡಿದ. ಪಿಶಾಚಿ ಅರಚಿತು. ಸುತ್ತಿ ಸುತ್ತಿ ಸತ್ತೇ ಹೋಯಿತು.

ಬಿಸಿಲ ಬೆಳಗುವ ಹಸಿರ ಸಿರಿನಾಡ ಸೀಮೆ

ಕೋಡಂಗಿ ಬಡಾಯಿ ಕೊಚ್ಚಿಕೊಂಡ. ಅರಮನೆಯಲ್ಲಿ ಎಲ್ಲವನ್ನೂ ಮಾಡಿದ್ದು ತಾನೇ ಎಂದ. ಭೋಳೆಶಂಕರ ದಡ್ಡ ಅಂದ. ಮೋಸ ಹೋಗಲಿಕ್ಕೆ ಹುಟ್ಟಿದವ ಎಂದ. ಅಷ್ಟರಲ್ಲಿ ಅರಮನೆಯಿಂದ ಮಂತ್ರಿ ಬಂದ. ಮೊದಲು ಕೋಡಂಗಿ ತಾನೇ ಭೋಳೆಶಂಕರ ಅಂದ. ನಂತರ ಅಪಾಯ ಎಂದು ಭೋಳೆಶಂಕರನನ್ನು ತೋರಿಸಿದ. ಮಂತ್ರಿ ಭೋಳೆಶಂಕರನಿಗೆ ಶುಭಾಶಯ ಹೇಳಿದ. ಭೋಳೆಶಂಕರನ ಮದ್ದಿನಿಂದ ರಾಜಕುಮಾರಿಯ ಹೊಟ್ಟೆನೋವು ವಾಸಿಯಾಗಿತ್ತು. ರಾಜ ಮಗಳನ್ನೂ ರಾಜ್ಯವನ್ನು ಕೊಡಲು ತಯಾರಾಗಿದ್ದ. ಮಂತ್ರಿಯ ಮೂಲಕ ಹೇಳಿಕಳಿಸಿದ್ದ. ಭೋಳೆಶಂಕರ ಮೊದಲು ಒಪ್ಪಲಿಲ್ಲ. ನದಿಯನ್ನು ಕಟ್ಟಿಹಾಕಲು ಆಗದು. ಅವನದೇ ಆದ ನಿಯಮಗಳು ಇದ್ದವು. ಅವನ್ನು ಹೇಳಿದ. ನಾನು ರಾಜನಾದರೆ ಸೈನ್ಯ ಇರುವದಿಲ್ಲ. ತೆರಿಗೆಗಳು ಇರುವದಿಲ್ಲ. ರಾಜರಾಣಿಯರೂ ದುಡಿಯಬೇಕು. ಸೋಂಬೇರಿಗಳಿಗೆ ಅವಕಾಶ ಇಲ್ಲ. ಮುದುಕರು, ಮಕ್ಕಳು, ಬಲಹೀನರು, ಉಂಡಾದ ಮೇಲೆ ಸೋಂಬೇರಿಗಳಿಗೆ ಊಟ ಎಂದು ವಿವರಿಸಿದ.

ಕೆಲಸಕ್ಕೆ ಕೆಲಸ. ನಾಣ್ಯದ ಅಗತ್ಯವಿಲ್ಲ. ಹಣಸಂಗ್ರಹ ಮಾಡುವದಿಲ್ಲ. ಕಳ್ಳಕಾಕರ ಭಯ ಇಲ್ಲ. ದಾರಿ ತಪ್ಪಿದವರಿಗೆ ಬುದ್ಧಿ ಇದ್ದವರು ಬುದ್ಧಿ ಹೇಳಬೇಕು. ಬೇರೆ ಕಾನೂನು ಬೇಡ. ಜೀವನ ವಿಧಾನ ಸರಳ.

ಇವನ್ನೆಲ್ಲ ರಾಜನಿಗೆ ಹೇಳಲು ಮಂತ್ರಿ ಹೊರಟ.



ಭೋಳೆಶಂಕರ ಶಿವಪುರದ ಮಹಾರಾಜನಾಗಿರುವುದು

ಭೋಳೆಶಂಕರನ ಶರತ್ತಿಗೆ ರಾಜ ಒಪ್ಪಿದ್ದ. ರಾಜಕುಮಾರಿ ಭೋಳೇಶಂಕರನನ್ನು ಮನಸಾರೆ ಮೆಚ್ಚಿದ್ದಳು. ಹುಡುಗಿಯರ ಜತೆ ಹಾಡಲು ಬಂದಿದ್ದಳು. ಶಿವನ ಇಚ್ಛೆ ಎಂದು ಭೋಳೆಶಂಕರ ಒಪ್ಪಿದ. ಕೋಡಂಗಿ ಚಿಳ್ಳೆಗಳನ್ನೂ ಪಿಳ್ಳೆಗಳನ್ನೂ ಸೇರಿಸಿದ. ಬೆಪ್ಪುತಕ್ಕಡಿ ಭೋಳೇಶಂಕರ ಮಾಹಾರಾಜರಿಗೆ ಜಯವಾಗಲಿ ಎಂದು ಹೇಳಿಸಿದ. ಭೋಳೆಶಂಕರನೂ ಹುಡುಗಿಯರಿಗೆ ಹಾಡಲು ಹೇಳಿದ. ಬಹುಮಾನ ಕೊಡುವುದಾಗಿ ಹೇಳಿದ. ಹುಡುಗಿಯರು ನಾಚಿಕೊಂಡರು. ಆಮೇಲೆ ಎಲ್ಲರೂ ಸೇರಿ ಹಾಡಿದರು.

ಭೋಳೇಶಂಕರ ಜೋಳದ ಚೀಲ ತರಿಸಿದ. ಹತ್ತಿರ ನಿಂತ ಪಿಶಾಚಿ ಹೇಳಿಕೊಟ್ಟ ಮಂತ್ರ ಹೇಳಿದ. ಧಾನ್ಯ ನಾಣ್ಯವಾಯಿತು. ಎಲ್ಲರಿಗೂ ಹಂಚಿದ. ಎಲ್ಲರೂ ತನಗೆ ತನಗೆ ಎಂದು ತೆಗೆದುಕೊಂಡರು.

ಹುಲ್ಲನ್ನೂ ತರಿಸಿದ. ಮಂತ್ರ ಹೇಳಿ ಪೇದೆಗಳನ್ನು ಮಾಡಿಸಿದ. ಕೋವಿ ಹಾಡು ಹೇಳಿಸಿದ. ಶಿವಾಪುರದ ಬಗ್ಗೆ ಹಾಡು ಹೇಳಿಸಿದ. ಪೇದೆಗಳನ್ನು ಊರ ತುಂಬ ಮೆರವಣಿಗೆ ಮಾಡಿಸಿದ. ಊರ ಮಕ್ಕಳೂ ಹೆಂಗಸರೂ ಖುಷಿ ಪಟ್ಟರು. ನಂತರ ಪೇದೆಗಳನ್ನು ತೋಟಕ್ಕೆ ಕಳಿಸಿದ.

ಚಿನ್ನವ ಹೊಗಳಯ್ಯಾ

ಭೋಳೆಶಂಕರ ಈಗ ರಾಜ. ಎಂದಿನ ಹಾಗೇ ಹೊಲದಲ್ಲಿ ಮೈಮುರೀ ದುಡಿಯುತ್ತಿದ್ದ. ಅಲ್ಲಿಗೆ ಡಬ್ಬೂ ಸಾವ್ಕಾರ ಓಡಿ ಬಂದ. ತಮ್ಮ ಊರಿವನರಿಗೆ ಚಿನ್ನದ ನಾಣ್ಯ ಕೊಟ್ಟಿದ್ದ. ಆ ಸುದ್ದಿ ಡಬ್ಬೂ ಸಾವ್ಕಾರನ ಕಿವಿ ತಲುಪಿತ್ತು. ಅವನ ವ್ಯಾಪಾರಕ್ಕೆ ಹಣ ಬೇಕಾಗಿತ್ತು. ಭೋಳೇಶಂಕರನನ್ನು ಬೇಡಿದ. ಭೋಳೆಶಂಕರ ಕೊಡಲು ಒಪ್ಪಿದ. ಹೆಚ್ಚಿಗೆ ಧಾನ್ಯ ಇರಲಿಲ್ಲ. ಇದ್ದಷ್ಟನ್ನು ತರಿಸಿದ. ಪಿಶಾಚಿ ಕಲಿಸಿದ ಮಂತ್ರ ಹೇಳಿದ. ಧಾನ್ಯ ನಾಣ್ಯವಾಯಿತು. ಡಬ್ಬು ತನ್ನ ಕಣ್ಣುಗಳನ್ನೇ ನಂಬಲಿಲ್ಲ. ಅಸಲೀ ಚಿನ್ನದ ನಾಣ್ಯಗಳು. ಆತ ಚಿನ್ನವನ್ನು ಹೊಗಳಿದ. ಜಗದಲ್ಲಿ ಚಿನ್ನವೇ ಮಿಗಿಲು ಎಂದ. ಹೊಗಳಲು ನಾಲಗೆ ಏಳದಿದ್ದರೆ ಬಾಯಿಮುಚ್ಚಿ ಹೊಗಳು ಅಂದ. ಚಿನ್ನ ನೋಡಿ ತುಂಬ ಸಂತೋಷವಾಗಿತ್ತು. ಗಾಡಿ ತಂದ. ತೆಗೆದುಕೊಂಡು ಹೋದ. ಈ ಕಡೆ ಸರದಾರ ಸೋಮಣ್ಣ ಬಂದ. ಅವನಿಗೆ ಪೇದೆ ತಯಾರಿಸುವ ಸುದ್ದಿ ಮುಟ್ಟಿತ್ತು. ಬಂದವನೇ ಪೇದೆಗಳನ್ನು ಹುಡುಕಿದ. ಸೈನಿಕರಿದ್ದರೆ ರಾಜ್ಯಕಟ್ಟಬಹುದು, ಗೆಲ್ಲಬಹುದು. ಅವನಿಗೆ ಒಂದು ಲಕ್ಷದಷ್ಟು ಜವಾನರು ಬೇಕಿದ್ದರು. ತಮ್ಮನನ್ನು ಬೇಡಿದ. ತಯಾರಿಸಿಕೊಡು ಎಂದ. ಭೋಳೆಶಂಕರ ಒಪ್ಪಿದ. ಹುಲ್ಲು ಹೊರೆ ತರಿಸಿದ. ಪಿಶಾಚಿ ಕಲಿಸಿದ ಮಂತ್ರ ಹೇಳಿದ. ಸಾವಿರ ಸಾವಿರ ಸೈನಿಕರು ಬಂದರು. ಸಾಕಾ ? ಎಂದು ಕೇಳಿದ. ಅಣ್ಣಾ ಸದ್ಯಕ್ಕೆ ಸಾಕು ಅಂದ. ಸೈನಿಕರನ್ನು ಕರೆದುಕೊಂಡು ಹೊರಟುಹೋಗಲು ಹೇಳಿದ. ಸರದಾರನಿಗೆ ಅದೇ ಬೇಕಾಗಿತ್ತು. ಆತ ಸಂತೋಷದಿಂದ ಹೊರಟ. ಶಿವನಾಮ ಸ್ಮರಣೆ ಮಾಡಿ ಅಣ್ಣನಿಗೆ ಒಳಿತನ್ನು ಹಾರೈಸಿದ.

ಕತ್ತಲೆಯ ನಿಜಜನಕ ಬಂದನು.

ಸೈತಾನ ದೊರೆಗೆ ಶಿವಾಪುರದ ಸುದ್ದಿಯೇ ಬಂದಿರಲಿಲ್ಲ. ವಿಚಾರಿಸಲು ಖುದ್ದಾಗಿ ಬಂದ. ಬೆಪ್ಪುತಕ್ಕಡಿಗೆ ಪಿಶಾಚಿಗಳು ಸೋತಿದ್ದವು. ಕೈಯಲ್ಲಿದ್ದ ವರಗಳನ್ನು ಕಳೆದುಕೊಂಡಿದ್ದರು. ಈ ನಡುವೆ ಲೋಕ ಬದಲಾಗಿತ್ತು. ಬೆಪ್ಪುತಕ್ಕಡಿ ಕಿರೀಟ ಇಲ್ಲದ ರಾಜನಾಗಿದ್ದ. ಅವನ ಅಣ್ಣಂದಿರೂ ರಾಜರಾಗಿದ್ದರು. ಸೈತಾನನಿಗೆ ಭೋಳೇಶಂಕರ ಅರಗಲಿಲ್ಲ. ಅಣ್ಣಂದಿರು ನಾಶವಾಗಿದ್ದರು. ಆಸೆಯ ಬೆನ್ನು ಹತ್ತಿದ್ದರು.

ಸೈತಾನ ಸೇನಾಪತಿಯಾದ. ಅವನ ಆಸೆಗಳನ್ನು ಮತ್ತೂ ಹೆಚ್ಚಿಸಿದ. ರಾಜ್ಯ ಗೆಲ್ಲಲು ಪ್ರಚೋದಿಸಿದ. ಅದಕ್ಕೆ ಸೇನಾಬಲ ಬೇಕಿತ್ತು. ಆಯುಧಗಳು ಬೇಕಿದ್ದವು. ಸಿಡಿದು ಅರೆನಿಮಿಷದಲ್ಲಿ ನಾಶಮಾಡುವ ಬಾಂಬುಗಳು ಬೇಕಾಗಿದ್ದವು. ಸಾವ್ಕಾರನೊಂದಿಗೆ ಒಪ್ಪಂದ ಮಾಡಿಕೊಳ್ಳಲು ಸೈತಾನ ಸಲಹೆ ಮಾಡಿದ. ಭೋಳೆಶಂಕರನಿಗೆ ಸೈನ್ಯ ತಯಾರಿಸಲು ಹೇಳಬೇಕು ಎಂದ.

ಸೈತಾನ ಡಬ್ಬು ಸಾವ್ಕಾರನ ಮಂತ್ರಿಯಾಗಿ ಕಾಣಿಸಿಕೊಂಡ. ಅವನ ಕೋಶ ಖಾಲಿಯಾಗಿತ್ತು. ಜನರಿಗೆ ತೆರಿಗೆ ಕೊಡಲು ಕಷ್ಟವಾಗಿತ್ತು. ಅವರು ವಲಸೆ ಹೋಗುತ್ತಿದ್ದರು. ಸೋಮಣ್ಣನೊಂದಿಗೆ ಒಪ್ಪಂದ ಮಾಡಿಕೊಳ್ಳಲು ಮಂತ್ರಿ ಸಲಹೆ ಮಾಡಿದ. ಸೋಮಣ್ಣ, ಡಬ್ಬು ಇಬ್ಬರೂ ಭೋಳೆಶಂಕರನಲ್ಲಿಗೆ ಹೋಗಬೇಕು ಎಂದು ಆಯಿತು. ಭೋಳೇಶಂಕರ ಅವರಿಗೆ ಸೈನ್ಯವನ್ನು ಮಾಡಿಕೊಡಬೇಕಾಗಿತ್ತು. ಅಲ್ಲದೆ ಚಿನ್ನದ ನಾಣ್ಯವೂ ಬೇಕಾಗಿತ್ತು.

ವಾಸಿಯಾಗದ ರೋಗ

ಭೋಳೇಶಂಕರ ಅವನ ರಾಣಿ ಹೊಲದಲ್ಲಿ ದಿನಾ ದುಡಿಯುತ್ತಿದ್ದರು. ಒಬ್ಬರನ್ನು ಒಬ್ಬರು ತುಂಬ ಪ್ರೀತಿಸುತ್ತಿದ್ದರು. ಅದನ್ನೇ ಹೇಳಿಕೊಳ್ಳುತ್ತ ಕುಳಿತಿರಲಿಲ್ಲ. ಭೋಳೆಶಂಕರ ಮೊದಲು ಅವಳನ್ನು ಮದುವೆ ಆಗಬಾರದು ಎಂದುಕೊಂಡಿದ್ದ. ತಾನು ಹುಂಬ ರೈತ. ತನಗೂ ರಾಜಕುಮಾರಿಗೂ ಜೋಡಿಯಲ್ಲ ಎಂದು ತಿಳಿದಿದ್ದ.

ಅಲ್ಲಿಗೆ ಕೋಡಂಗಿ ಬಂದ. ರಾಜನಾಗಿ ದುಡಿಯುವ ಬಗ್ಗೆ ಬೇಜಾರುಮಾಡಿಕೊಂಡ. ರಾಜ, ರೈತ, ಇಬ್ಬರೂ ದುಡಿಯಬೇಕು. ಉಂಡ ಅನ್ನ ಮೈಗೆ ಹತ್ತುತ್ತದೆ. ಕೂತು ಉಂಡರೆ ರಾಜ್ಯ ನಡೆಯದು. ರಾಣಿಯೂ," ಮಲ್ಲಿಗೆ ಎಲ್ಲಿದ್ದರಲ್ಲಿ ನಾರು, ಅವರಿದ್ದಲ್ಲಿ ನಾನು" ಎಂದಳು. ಸರದಾರ ಸೋಮಣ್ಣ, ಸಾವ್ಕಾರ ಡಬ್ಬಣ್ಣ ಅಲ್ಲಿಗೇ ಬಂದರು. ತಮ್ಮ ರಾಜನಾದ ಬಗ್ಗೆ ಸಂತೋಷ ಎಂದರು. ತಮ್ಮನ ದರ್ಬಾರನ್ನು ನೋಡಿದರು. ಸೈನ್ಯ, ನಾಣ್ಯ, ತೆರಿಗೆ ಇಲ್ಲದ ರಾಜ್ಯ ನೋಡಿದರು. ನಂತರ ಬಂದ ಕಾರಣ ಹೇಳಿದರು. ಭೋಳೇಶಂಕರ ಇಬ್ಬರ ಬೇಡಿಕೆಯನ್ನೂ ನಿರಾಕರಿಸಿದ. ಜವಾನರು ಬರೀ ಹಾಡಿಕೊಂಡು ಕುಣಿಯುತ್ತಿರಲಿಲ್ಲ. ಬೇರೆಯವರನ್ನು ಕೊಲ್ಲುತ್ತಿದ್ದರು. ಹೆಂಗಸರು ವಿಧವೆಯರಾಗಿದ್ದರು. ಮಕ್ಕಳು, ಮುದುಕರು ಅನಾಥರೇ ಆಗಿದ್ದರು. ಆದ್ದರಿಂದ ಅಣ್ಣನಿಗೆ ಸೈನ್ಯ ಮಾಡಿಕೊಡಲಿಲ್ಲ. ಡಬ್ಬೂ ಸಾವುಕಾರನಿಗೂ ನಾಣ್ಯ ಮಾಡಿಕೊಡಲಿಲ್ಲ. ಆತ ಜನರಿಗೆ ಭಾರಿ ತೆರಿಗೆ ಹೇರಿದ್ದ. ಹಸು, ಕರು, ಮಾರಿ ಜನ ತೆರಿಗೆ ಕಟ್ಟುತ್ತಿದ್ದರು. ಕಾರ್ಖಾನೆಗಳ ಹೊಗೆ ಜನರಿಗೆ ತೊಂದರೆ ಆಗಿತ್ತು. ಇಬ್ಬರ ರಾಜ್ಯಭಾರಕ್ರಮವನ್ನೂ ಭೋಳೇಶಂಕರ ವಿರೋಧಿಸಿದ. ಅವರು ಭೋಳೇಶಂಕರನ ಹಿತನುಡಿಯನ್ನು ಕೇಳಲಿಲ್ಲ. ಅತಿ ಆಸೆಯ ರೋಗ ಹಿಡಿದೇ ಇತ್ತು. ಅದು ವಾಸಿಯಾಗದ ರೋಗ. ಸೈತಾನನಂಥ ಸಲಹೆಗಾರ ಅವರನ್ನು ಹಿಡಿತದಲ್ಲಿ ಇಟ್ಟಿದ್ದ.

ಭೋಳೇಶಂಕರನ ರಾಜ್ಯ ಸುಟ್ಟು ಬೂದಿ ಆಗುತ್ತದೆ ಎಂದು ಹೆದರಿಸಿದರು. ಅವನ ರಾಣಿ ತಿರುಪೆ ಬೇಡಬೇಕಾಗತ್ತದೆ ಎಂದರು. ಹೊಟ್ಟೆಪಾಡೇ ಕಷ್ಟವಾಗುತ್ತದೆ ಎಂದರು. ಭೋಳೇಶಂಕರ ಹೆದರಲಿಲ್ಲ. ಶಿವನ ಬಯಕೆ ಇದ್ದಂತೆ ಆಗಲಿ ಎಂದ. ಅಣ್ಣಂದಿರ ಕೋಪವನ್ನು ಎಣಿಸಲೇ ಇಲ್ಲ. ಮೊದಲು ಇಲ್ಲಿಂದ ಹೊರಡಿ ಎಂದ. ಅವರನ್ನು ಗಮನಿಸದೆ ದುಡಿಮೆಯಲ್ಲಿ ತೊಡಗಿದ.

ಹಸಿರ ತುಳಿದರೋ

ಶಿವಾಪುರಕ್ಕೆ ಸೈನಿಕರು ದಾಳಿ ಇಟ್ಟರು. ಸೈತಾನನೇ ಸೇನಾಪತಿ ಆಗಿದ್ದ. ಸೈನಿಕರು ಕಾಳಗ ಮಾಡುವದು ಸಾಧ್ಯವಿರಲಿಲ್ಲ. ಭೋಳಶಂಕರನಿಗೆ ಸೈನ್ಯವೇ ಇರಲಿಲ್ಲ. ಜನ ಈ

ಸೈನಿಕರನ್ನು ಗೆಳೆಯರಂತೆ ಕಂಡರು. ಊಟ, ತಿಂಡಿ ಕೊಟ್ಟರು. ಗುರುತು ಹಿಡಿದು ಮಾತಾಡಿಸುತ್ತಿದ್ದರು. ಈ ವಿಷಯವನ್ನು ಸೈನಿಕರು ಸೇನಾಪತಿಗೆ ತಿಳಿಸಿದರು. ಅವನು ಬೈದ. ಮನೆಗಳನ್ನು ಲೂಟಿ ಮಾಡಿ ಅಂದ. ಸೈನಿಕರಿಂದ ಅದೂ ಆಗಲಿಲ್ಲ. ಜನ ಕೇಳಿದ್ದನ್ನು ಕೊಡುತ್ತಿದ್ದರು. ಜೊತೆಯಲ್ಲೇ ಇರಿ ಎನ್ನುತ್ತಿದ್ದರು. ಜಗಳದ ಭಾಷೆ ಆಡಿದರೆ ಗೆಳೆತನದ ಭಾಷೆ ಆಡುತ್ತಿದ್ದರು. ಸೇನಾಪತಿ ಮನೆಗಳಿಗೆ ಬೆಂಕಿಹಚ್ಚಲು ಹೇಳಿದ. ಸೈನಿಕರು ಒಪ್ಪಲಿಲ್ಲ. ಸೈತಾನನಿಗೆ ಸಿಟ್ಟು ಬಂತು. ಮಾತು ಕೇಳದವರನ್ನು ಸುಡುವೆ ಎಂದ. ಸೈನಿಕರು ಹೊರಟರು. ಸೇನಾಪತಿಯೂ ಹೊರಟ.

ಬರಿಗೈಲಿ ಮಾಡ್ಯಾನ ನಮಸ್ಕಾರ

ಊರ ಜನ ಭೋಳೇಶಂಕರ ಇದ್ದಲ್ಲಿ ಓಡಿಬಂದರು. ಸೈನಿಕರ ಉಪಟಳ ವಿವರಿಸಿದರು. ಅವನು ಎಲ್ಲವನ್ನೂ ಕೇಳಿದ. ಜನರಿಗೆ ಅಭಯನೀಡಿದ. ಸೈನಿಕರು ಅಲ್ಲಿಗೇ ಧುಮುಕಿದರು. ಎಲ್ಲರನ್ನೂ ಸುತ್ತುವರೆದರು. ಬಂದೂಕುಗಳನ್ನು ಗುರಿಹಿಡಿದು ನಿಂತರು. ಭೋಳೇಶಂಕರ ಹೆದರಲಿಲ್ಲ. ಅವನ ನೆತ್ತರಿಗೆ ಸೈನಿಕರು ಹಾತೊರೆದರು. ಆತ ಪಿಶಾಚಿ ಕಲಿಸಿದ ಮಂತ್ರ ಹೇಳಿದ. ಪೇದೆಗಳೆಲ್ಲ ಹುಲ್ಲೆಸಳಾದರು. ಸೈತಾನ ಕಾಲುಕಿತ್ತ. ಜನ ಅಚ್ಚರಿಪಟ್ಟರು.

ಕಸಿಯುವಂಥಾ ಅಧಿಕಾರ ದೇವರಂಥಾ ದೇವರಿಗಿಲ್ಲ

ಸೈತಾನನಿಗೆ ಹಸಿವು ಆಯಿತು. ಅನ್ನಬೇಕು ಎಂದ. ಪುಕ್ಕಟೆ ಬೇಡ, ನಾಣ್ಯ ಕೊಡುತ್ತೇನೆ ಎಂದ. ನಾಣ್ಯ ಪಡೆದು ಅನ್ನ ಹಾಕಲು ಜನ ಒಪ್ಪಲಿಲ್ಲ. ಜನರ ಬಳಿಯಲ್ಲಿ ನಾಣ್ಯಗಳು ಬೊಗಸೆ ತುಂಬಾ ಇದ್ದವು. ರಾಜ್ಯದಲ್ಲಿ ತೆರಿಗೆ ಇರಲಿಲ್ಲ. ಕೆಲಸದಿಂದ ಕೆಲಸ ವಾಗಿತ್ತು. ಅನುಕೂಲಗಳನ್ನು ವಿನಿಮಯ ಮಾಡಿಕೊಳ್ಳುತ್ತಿದ್ದರು. ನಾಣ್ಯದ ಉಪಯೋಗವೇ ಅವರಿಗೆ ಇರಲಿಲ್ಲ.

ಸೈತಾನನಿಗೆ ರೋಸಿ ಹೋಯಿತು. ತನ್ನಷ್ಟಕ್ಕೆ ತನ್ನನ್ನು ಬಿಡಿ ಅಂದ. ಬಿಡದಿದ್ದರೆ ಸಾಯುತ್ತೇನೆಂದ. ಜನ ಊಟಮಾಡಿ ಸಾಯಿ ಅಂದರು. ಸಂಗತಿಯನ್ನು ಮಹಾರಾಜ



ಭೋಳೆಶಂಕರನನ್ನು ಮತ್ತು ನಾಗರೀಕರನ್ನು ಸೈತಾನನ ಸೈನಿಕರು ಮುತ್ತಿಗೆ ಹಾಕಿರುವುದು

ಭೋಳೆಶಂಕರನಿಗೆ ತಿಳಿಸಿದರು.

ಕೇಳಿ ತಿಳಕೋ ಏನಸುದ್ದಿ ಹೇಳಿ ನಮಗಂತ

ಭೋಳೆಶಂಕರ ಜನರು ಹೇಳಿದ್ದನ್ನು ಕೇಳಿದ. ಕೋಡಂಗಿ ಸೈತಾನನನ್ನು ಕರತಂದ. ಊಟ ನೀಡಲು ತಕರಾರು ಇರಲಿಲ್ಲ. ಸೈತಾನ ಊಟದ ಸಾಲಿನಲ್ಲಿ ಕುಳಿತ. ರಾಣಿ ಊಟ ಬಡಿಸುತ್ತಾ ಬಂದಳು. ಅಲ್ಲೇ ನಿಂತಳು. ಆಮೇಲೆ ಊಟ ಮಾಡು ಎಂದಳು. ಅವನ ಕೈ ದುಡಿದು ಜಡ್ಡುಗಟ್ಟಿರಲಿಲ್ಲ. ಭೋಳೆಶಂಕರನೂ ಹಾಗೇ ಹೇಳಿದ. ಸೈತಾನನಿಗೆ ಬೇಸರ ಆಯಿತು. ಎಲ್ಲರನ್ನೂ ಹಂದಿ ಎಂದು ಬೈದ. ಯಾರಿಗೂ ತಲೆ ಇಲ್ಲ ಎಂದ. ತಲೆಯಿಂದ ಕೆಲಸಮಾಡಲು ಕಲಿಸಿಕೊಡುವ ಭರವಸೆ ನೀಡಿದ. ಚಳಿಗಾಲದಲ್ಲಿ ಕೈ ಸೆಟೆಯುತ್ತದೆ. ಆಗ ತಲೆಯಿಂದ ಕೆಲಸ ಒಳ್ಳೆಯದು ಎಂದ. ಭೋಳೆಶಂಕರ ಒಪ್ಪಿದ. ಜನರೆಲ್ಲ ಸೇರಲು ಡಂಗುರ ಸಾರಿಸಿದ.

ಜಯ ಜಯಾ ಶಿವಪುರಿಗೆ

ಎತ್ತರದ ಗೋಪುರ. ಮೇಲೆ ಸೈತಾನ ನಿಂತಿದ್ದ. ಕೆಳಗೆ ಭೋಳೆಶಂಕರ, ರಾಣಿ, ಜನ ನಿಂತಿದ್ದರು. ಸೈತಾನ ತಲೆಯಿಂದ ಕೆಲಸಮಾಡುವುದನ್ನು ಕಲಿಸಲು ಶುರುಮಾಡಿದ್ದ. ಭಾಷಣ ಮಾಡತೊಡಗಿದ. ನಾಣ್ಯಗಳನ್ನು ಬಳಕೆಗೆ ತರಬೇಕು ಎಂದ. ಅದರಿಂದ ಶ್ರಮವನ್ನು ಕೊಳ್ಳಬಹುದು ಎಂದ. ಬರೀ ಮಾತುಗಳನ್ನೇ ಸುರಿದ. ಜನರಿಗೆ ಏನೂ ತಿಳಿಯಲಿಲ್ಲ. ಭೋಳೆಶಂಕರ ಹೇಳಿದರೆ ತಿಳಿಯುತ್ತಿತ್ತು. ಕೈಯಿಂದ ಕೆಲಸ ಮಾಡಿದರೆ ಬುದ್ಧಿ ಬರುತ್ತದೆ. ಬೆವರೂ ಬರುತ್ತದೆ. ಬೆವರು ಒರೆಸಿಕೊಂಡು ಬುದ್ಧಿ ಕಲಿಯುವವನು ಜಾಣ. ಆದರೂ ಸೈತಾನ ತಲೆಯಿಂದ ಕೆಲಸಮಾಡುವದನ್ನು ಸುರು ಮಾಡಲಿಲ್ಲ. ದಿನದ ಕೆಲಸ ಬಿಟ್ಟು ಜನ ಅದನ್ನು ನೋಡಲು ನಿಂತಿದ್ದರು. ಸೈತಾನ ಮಾತನ್ನೇ ಮುಂದುವರಿಸಿದ. ನಗರದ ಸುಖ

ಮೇಲು ಎಂದ. ಶ್ರಮದ ದುಡಿಮೆ ಅನಾಗರಿಕ ಎಂದ. ಗುಂಡಿ ಒತ್ತಿ ಜಗತ್ತನ್ನು ನಾಶಪಡಿಸುವ ತಾಕತ್ತು ಪಡೆಯಿರಿ. ತಲೆ ಬಳಸುವ ವಿದ್ಯೆ ಕಲಿತುಕೊಳ್ಳಿ ಎಂದು ಉಪದೇಶಿಸಿದ. ಜನರಿಗೆ ತಿಳಿಯಲಿಲ್ಲ. ಸೈತಾನನ ಸ್ಮೈರಣೆ ಕೆಟ್ಟಿತು. ತಲೆ ಚಚ್ಚಿಕೊಂಡ. ಅದೇ ತಲೆಯ ಕೆಲಸ ಎಂದು ಜನ ತಿಳಿದರು. ತಲೆಯಿಂದ ನೆತ್ತರು ಸುರಿಯಿತು. ಜನ ಕೈಯಿಂದ ಕೆಲಸ ಮಾಡುವುದೇ ಒಳಿತು ಎಂದು ಬಗೆದರು. ಭೋಳೆಶಂಕರ ಸೈತಾನನಿಗೆ ಒಳಿತನ್ನು ಬಯಸಿದ. ಶಿವನ ಹೆಸರು ಹೇಳಿದ. ಸೈತಾನನಿಗೆ ಸಿಟ್ಟು ಬಂತು. ಅವನ ಗುಟ್ಟು ತಿಳಿಯಿತು. ಎಲ್ಲರೂ ಶಿವ ಶಿವ ಶಂಕರ, ಭೋಳೇಶಂಕರ, ಭೋಂ ಭೋಂ ಶಂಕರ ಎಂದು ಕೂಗಿದರು. ಸೈತಾನ ಗರಗರ ತಿರುಗಿದ. ನೆಲಕ್ಕೆ ಬಿದ್ದ. ಮತ್ತೆ ಏಳಲಿಲ್ಲ. ರಾಜ್ಯ ಕಳೆದುಕೊಂಡ ಅಣ್ಣಂದಿರೂ ಬಂದರು. ಅವರೂ ನಮ್ಮ ಒಟ್ಟಿಗೆ ಇರಲಿ ಎಂದು ಭೋಳೇಶಂಕರ ಹೇಳಿದ.

* * *

ಕನ್ನಡ ವಿಶ್ವವಿದ್ಯಾಲಯವು ... ರೆಗೆ ಉತ್ತಮ
ಹಾಗೂ ಉಪಯುಕ್ತವಾದ ... ಸ್ತಕ ರಚನಾ
ವಿಭಾಗ'ವನ್ನು ತೆರೆದಿದೆ. ... ಸ್ತಕ ರಚನೆ
ಮಾಡಬೇಕೆಂದು ಚಿಂತಿಸು... ಕ್ಷರರಿಗಾಗಿ
ಪುಸ್ತಕ ಬರೆಸುವ ತಮ್ಮ ... ಸಿಕೊಟ್ಟರು.
ವಿಶ್ವವಿದ್ಯಾಲಯವು ಈ ಯೆ... ೕಖಕರನ್ನು,
ಭಾಷಾತಜ್ಞರನ್ನು, ಶಿಕ್ಷಣತಜ್ಞ... ಭಿಪ್ರಾಯ,
ಸಲಹೆ, ಸಹಕಾರಗಳನ್ನು ಕೇ... ವಿನ್ಯಾಸ,
ಚಿತ್ರಗಳ ಮಹತ್ವ, ಸಾಹಿತ್ಯ... ಚರ್ಚಿಸಿ
ಯೋಜನೆಯನ್ನು ಅನುಷ್ಠಾನ...

ನವಸಾಕ್ಷರರಿಗಾಗಿ ಕನ್ನಡದ... ವಾಗಿರುವ
ಪುಸ್ತಕಗಳನ್ನೆಲ್ಲ ಒಟ್ಟುಗೂ... ತಜ್ಞರಿಂದ
ಪರಿಶೀಲಿಸಲಾಯಿತು. ಜೊತೆ... ಅವರಿಗೆ
ಕಮ್ಮಟಗಳನ್ನು ನಡೆಸಿ, ಪ್ರ... ಜಿಲ್ಲೆ,
ತಾಲೂಕುಗಳಿಗೆ ಕಳುಹಿಸಿ ಈ... ದ ಅದರ
ಗುಣದೋಷಗಳ ಬಗ್ಗೆ ಅಭಿಪ... ್ಯಾಲಯದ
ಗಣಕಯಂತ್ರದಲ್ಲಿ ವಿಶ್ಲೇಷಿಸಲ... ನೀಡಿದ್ದ
ಮಾಹಿತಿಗಳನ್ನೆಲ್ಲ ಮರು ಪರಿಶೀ... ವಿಷಯದ
ಆದ್ಯತೆಗಳನ್ನು ನಿರ್ಧರಿಸಿಕೊಂ... ನಮ್ಮ
ವಿಶ್ವವಿದ್ಯಾಲಯದ ಪ್ರಾಧ್ಯಾಪ... ಕೊಟ್ಟರು.
ಕಲಾವಿದರು ವಿಷಯಗಳಿಗೊಪ್ಪುವ ಚಿತ್ರಗಳನ್ನು ಬರೆದುಕೊಟ್ಟರು. ಹೀಗೆ ಸಿದ್ಧಗೊಂಡ ಹಸ್ತಪ್ರತಿಗಳನ್ನು ನವಸಾಕ್ಷರರ ಬಳಿ ಕೊಂಡೊಯ್ದು ಅವರ ಮುಂದೆ ಪರಿಸಿ ನಂತರ ಅವರ ಅಭಿಪ್ರಾಯ, ಪ್ರತಿಕ್ರಿಯೆಗಳನ್ನು ಅಳವಡಿಸಿ ಹಸ್ತಪ್ರತಿಯನ್ನು ಅಂತಿಮಗೊಳಿಸಲಾಯಿತು.

ನಮ್ಮ ಬಹುಸಂಖ್ಯಾತ ಸಮುದಾಯ ಅನಕ್ಷರಸ್ಥರೇ ಹೊರತು ಅವಿದ್ಯಾವಂತರಲ್ಲ. ನೃಪತುಂಗ ಹೇಳುವಂತೆ ಅವರು "ಚದುರರ್ ನಿಜದಿಂ ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತ ಮತಿಗಳ್". ಅನುಭವದಲ್ಲಿ, ವಿವೇಕದಲ್ಲಿ, ವ್ಯವಹಾರದಲ್ಲಿ, ತಿಳುವಳಿಕೆಯಲ್ಲಿ ಆ ಜನ ಚದುರರು. ಹೀಗೆಂದು ಅವರನ್ನು ಅಕ್ಷರದಲಿತರನ್ನಾಗಿಯೂ ಉಳಿಸುವಂತಿಲ್ಲ. ಅವರಲ್ಲಿ ಅಕ್ಷರ ಕಲಿಯುವ ಸಾಮರ್ಥ್ಯವಿದೆ. ಕಲಿಸುವ ಹೊಣೆ ಸರ್ಕಾರಗಳ, ವಿಶ್ವವಿದ್ಯಾಲಯಗಳ ಮೇಲಿದೆ. ಈ ನಿಟ್ಟಿನಲ್ಲಿ ದೇಶದಾದ್ಯಂತ ಸಾಕ್ಷರತಾ ಆಂದೋಲನ ನಡೆಯುತ್ತಿದೆ. ಆದರೆ ಈ ಅಕ್ಷರ ಸಂಸ್ಕೃತಿಯ ಆಂದೋಲನದಲ್ಲಿ ಕಲಿತವರಿಗೆ ಮತ್ತು ಕಲಿಯುವವರಿಗೆ ಉತ್ತಮ ಗುಣಮಟ್ಟದ ಪುಸ್ತಕಗಳ ಅವಶ್ಯಕತೆ ಇದೆ. ಕಲಿತವರು ಮರೆಯದಂತೆ, ಕಲಿಕೆಯನ್ನು ಮುಂದುವರಿಸುವಂತೆ ನೋಡಿ ಕೊಳ್ಳುವುದು ಎಲ್ಲರ ಕರ್ತವ್ಯ.

ಕನ್ನಡ ವಿಶ್ವವಿದ್ಯಾಲಯವು ನಾಡಿನ ಹಲವು ವಿದ್ವಾಂಸರೊಂದಿಗೆ ಸೇರಿ ನಡೆಸಿದ ಒಂದು ಸಾಮೂಹಿಕ ಪ್ರಯತ್ನದ ಫಲವಾಗಿ ಈ ಪುಸ್ತಕ ರೂಪತಾಳಿದೆ. ನವಸಾಕ್ಷರರು ಈ ಪುಸ್ತಕವನ್ನು ಪ್ರೀತಿಯಿಂದ ಸ್ವೀಕರಿಸುತ್ತಾರೆಂದು ನಂಬಿದ್ದೇವೆ. ಈ ಯೋಜನೆಯ ಯಶಸ್ಸಿಗೆ ಕಾರಣರಾಗಿರುವ ಉನ್ನತ ಸಲಹಾ ಸಮಿತಿ ಹಾಗೂ ಸಂಪಾದಕ ಸಮಿತಿಯ ಸದಸ್ಯರಿಗೆ, ಲೇಖಕರಿಗೆ, ಕಲಾವಿದರಿಗೆ ಹಾಗೂ ಈ ಯೋಜನೆಯಲ್ಲಿ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ನಮ್ಮೊಡನೆ ಪಾಲ್ಗೊಂಡವರೆಲ್ಲರಿಗೂ ನಮ್ಮ ಹೃತ್ಪೂರ್ವಕವಾದ ವಂದನೆಗಳು. ನಮ್ಮ ವಿಶ್ವವಿದ್ಯಾಲಯದ ಮೇಲೆ ವಿಶ್ವಾಸವಿಟ್ಟು ಇಂತಹ ಒಂದು ಗುರುತರವಾದ ಯೋಜನೆಯನ್ನು ವಹಿಸಿಕೊಟ್ಟ ಲೋಕಶಿಕ್ಷಣ ಇಲಾಖೆಯ ನಿರ್ದೇಶಕರಾದ ಶ್ರೀ ಲೂಕೋಸ್ ವಲ್ಲತ್ತರೈ ಅವರಿಗೆ ನನ್ನ ಕೃತಜ್ಞತೆಗಳು. ಓದುಗರು ಈ ಪುಸ್ತಕದ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ತಿಳಿಸಿದರೆ ನಮ್ಮ ಪಠ್ಯಪುಸ್ತಕ ರಚನೆಗೆ ಉಪಯೋಗವಾಗುತ್ತದೆ.

ಚಂದ್ರಶೇಖರ ಕಂಬಾರ
ಕುಲಪತಿಗಳು